**58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ**
**ಸಿಸಿಹೆಚ್-59**
**ಎಸ್.ಸಿ.ನಂ. 1319/2024**

ಪಿ.ಡಬ್ಲ್ಯೂ. 17
ಸಿ.ಡಬ್ಲ್ಯೂ. 49
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ: 30.06.2026

| | |
|---|---|
| **ಸಾಕ್ಷಿಯ ಹೆಸರು** | ಸಂದೀಪ್ ಎಸ್ |
| **ತಂದೆಯ ಹೆಸರು** | ಶೇಷಾದ್ರಿ |
| **ವಯಸ್ಸು** | 35 ವರ್ಷ |
| **ವೃತ್ತಿ** | ದುರ್ಗ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಕ್ಯಾಷಿಯರ್ ಕೆಲಸ |
| **ವಾಸ ಸ್ಥಳ** | ರಂಗಾಪುರ, ತುಮಕೂರು. |

ಈ ಹಂತದಲ್ಲಿ ಸಾಕ್ಷಿ ನ್ಯಾಯಾಲಯಕ್ಕೆ ತಮ್ಮ ಮನವಿಯನ್ನು ಸಲ್ಲಿಸಲು ಅವಕಾಶ ಮಾಡಿಕೊಡಲು ಕೋರಿಕೊಂಡಿರುತ್ತಾರೆ. ಅದಕ್ಕೆ ಅನುವು ಮಾಡಿಕೊಡಲಾಯಿತು.

ನಾನು ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ, ನ್ಯಾಯಾಲಯಕ್ಕೆ ಕಳೆದ ಮಂಗಳವಾರ ಮತ್ತು ಬುಧವಾರದಂದು ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ. ಗುರುವಾರ, ನನಗೆ ಪರಿಚಯವಿದ್ದ ಆಕರ್ಶ ಎಂಬ ವ್ಯಕ್ತಿ ನನಗೆ ಫೋನ್ ಮಾಡಿ ಏನೋ ಮಾತನಾಡುವುದಿದೆ ಎಂದು ಕರೆಯುತ್ತಿದ್ದ. ನಾನು ಒಂದು ಗಂಟೆಯ ವೈಟ್ ಮಾಡಿದ ನಂತರ ನಾನು ನಮ್ಮ ಬಾರ್ ಹತ್ತಿರ ಇರುವ ಇಂಡಿಯನ್ ಪೆಟ್ರೋಲ್ ಬಂಕ್‌ಗೆ ಹೋಗಿದ್ದೆ. ಆತ ಸಿಕ್ಕಾಗ ಆತನ ಕಾರ್ ನಲ್ಲಿ ಕುಳಿತುಕೊಳ್ಳಲು ಹೇಳಿರುತ್ತಾನೆ. ನಾನು ಆತನ ಕಾರ್ ನಲ್ಲಿ ಕುಳಿತಾಗ, ಹಿಂದಿನ ಸೀಟ್ ನಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದು, ಆಕರ್ಶ ನನ್ನ ಜೊತೆಗೆ ಏನೂ ಮಾತನಾಡಿರುವುದಿಲ್ಲ. ಹಿಂದಿನ ಸೀಟ್ನಲ್ಲಿ ಕುಳಿತ್ತಿದ್ದ ವ್ಯಕ್ತಿ

ಕೋರ್ಟ್ ಗೆ ಹೋಗಿದ್ದೀರಲ್ಲಾ ಏನು ಆಯಿತು ಎಂದು ಕೇಳಿರುತ್ತಾರೆ. ಆಗ ನಾನು ಅವರಿಗೆ ನಮ್ಮನ್ನು ಆ ದಿನ ಒಳಗೆ ಕರೆದಿಲ್ಲ, ನನ್ನ ಸಾಕ್ಷಿ ಆಗಿರುವುದಿಲ್ಲ , ನಾನು ವಾಪಸ್ ಬಂದಿರುತ್ತೇನೆ ಎಂದು ಹೇಳಿರುತ್ತೇನೆ. ಅಷ್ಟರಲ್ಲಿ ಅದೇ ಕಾರಿಗೆ ಇನ್ನೊಬ್ಬ ವ್ಯಕ್ತಿ ಬಂದು ಕುಳಿತಿರುತ್ತಾನೆ. ಆತ ಇನ್ನೊಬ್ಬ ವ್ಯಕ್ತಿಗೆ ಕಾಲ್ ಮಾಡಿರುತ್ತಾನೆ. ಆ ಕರೆ ಸ್ವೀಕರಿಸಿದ ವ್ಯಕ್ತಿ, ಆತನಿಗೆ ಫೋನ್ ಕಾಲ್ ಬೇಡ, whatsapp ಕಾಲ್ ಮಾಡು ಎಂದು ತಿಳಿಸಿರುತ್ತಾನೆ. ಆತ ತನ್ನ ಮೊಬೈಲನ್ನು ಕೊಟ್ಟು. ನಮ್ಮ ವಕೀಲರು ಇದ್ದಾರೆ ಮಾಡನಾಡು ಎಂದು ಹೇಳಿರುತ್ತಾರೆ.

ಆ ಕಾಲ್ ನಲ್ಲಿ 4 ಜನ connected ಆಗಿದ್ದರು. ಆ ಕಾಲ್ ನಲ್ಲಿ ಇದ್ದವರು ನನಗೆ ನಿಮಗೆ ಕೊಲೆ ಆರೋಪಿಗಳು ಯಾರಾದರೂ ತೋರಿಸಿದರೆ ಗೊತ್ತಿಲ್ಲ ಎಂದು ಹೇಳಿ ಎಂದು ಹೇಳಿರುತ್ತಾರೆ. ಡಿ ವಿ ಆರ್ ಮತ್ತು ಪೆನ್ ಡ್ರೈವ್ ನ್ನು ಪೋಲೀಸರೇ ರೆಕಾರ್ಡ ಮಾಡಿಕೊಂಡು ಹೋಗಿರುತ್ತಾರೆ ಹಾಗೂ ಪೋಲೀಸರೇ ಏನಕ್ಕೊ ಸಹಿ ಹಾಕಿಸಿಕೊಂಡು ಹೋಗಿರುತ್ತಾರೆ ಎಂದು ಹೇಳಲು ಹೇಳಿರುತ್ತಾರೆ. ಪೋಲೀಸರು ನಿಮಗೆ ಏನಾದರೂ ಹೇಳಿಕೊಟ್ಟಿದ್ದಾರೆಯೇ ಎಂದು ಸಹ ಕೇಳಿರುತ್ತಾರೆ. ಅದಕ್ಕೆ ನಾನು ಅವರು ಏನೂ ನನಗೆ ಹೇಳಿಕೊಟ್ಟಿಲ್ಲ, ಅದು ಏನು ಇದೆ ಹಾಗೆ ಹೇಳುತ್ತೇನೆ ಎಂದು ಹೇಳಿರುತ್ತೇನೆ. ಆನಂತರ ನಾನು ಕಾರ್ ನಿಂದ ಇಳಿದು ವಾಪಸ್ ಬಂದಿರುತ್ತೇನೆ.

ಇದಾದ ನಂತರ ನಮ್ಮ Bar and Restaurant ಗೆ ಅಪರಿಚಿತ ವ್ಯಕ್ತಿಗಳು ಬಂದು ಹೋಗುವುದು ಮಾಡುತ್ತಿದ್ದು, ಅವರು ನನ್ನನ್ನು observe ಮಾಡುತ್ತಿದ್ದಾರೆ. ಈ ಕುರಿತು ನಾನು ಕಾಮಾಕ್ಷಿ ಪಾಳ್ಯ ಪೋಲೀಸ್ ಠಾಣೆಯ ಠಾಣಾಧಿಕಾರಿಗಳಾದ ನಟೇಶ್ ರವರಿಗೆ ತಿಳಿಸಿರುತ್ತೇನೆ. ಈ ಕಾರಣದಿಂದ ನನಗೆ ಸಾಕ್ಷಿ ನುಡಿಯಲು

ಭಯವಾಗುತ್ತಿದೆ.

This statement of the witness appears that there is on approach by some person to tamper the witness at CW-49 through his known person Akarsh. In this regard the witness is directed to file separate affidavit so that the court can take action against the concern persons in accordance with law.

**ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ**

ನಾನು ಯಾವ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂಬುದು ನನಗೆ ಗೊತ್ತು. ದಿ. 08.06.2024 ರಂದು ರೇಣುಕಾ ಸ್ವಾಮಿ ಮತ್ತು ಇತರರರು ನಮ್ಮ ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್ ಗೆ ಬಂದು ಹೋಗಿರುವುದರ ಬಗ್ಗೆ video clippings ಬೇಕು ಎಂದು ಠಾಣಾಧಿಕಾರಿಗಳು ದಿ. 19.06.2024 ರಂದು ನನಗೆ ನೋಟೀಸನ್ನು ಜಾರಿ ಮಾಡಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ದಿ. 19.06.2024 ರಂದು ನೀಡಿದ ಪೋಲೀಸ್ ನೋಟೀಸನ್ನು ತೋರಿಸಿದಾಗ, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನೋಟೀಸನ್ನು **ನಿಪಿ-114** ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-114(ಎ) ಎಂದು ಗುರುತಿಸಲಾಯಿತು.

2. ದಿ. 12.07.2024 ರಂದು ಪಂಚನಾಮೆಗೆ ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ಕಾಮಾಕ್ಷಿ ಪಾಳ್ಯ ತನಿಖಾಧಿಕಾರಿ ಯಾದ ವಿನಾಯಕ್ ರವರು ನಮ್ಮ

ದುರ್ಗ ಬಾರ್ ಅಂಡ್ ರೆಸ್ಟೋರೆಂಟ್ ಗೆ ಬಂದಿದ್ದರು. ಅವರು ಬೆ. 11 ಗಂಟೆಯಿಂದ 1.30 ಗಂಟೆಯವರೆಗೆ ನಮ್ಮ ದುರ್ಗ ಬಾರ್ ಅಂಡ್ ರೆಸ್ಟೋರೆಂಟ್ ರಲ್ಲಿ ಇದ್ದರು. ನಾನು ಅವರಿಗೆ ಒಂದು ಪೆನ್ ಡ್ರೈವ್ ನ್ನು ಹಾಗೂ ಒಂದು ಪ್ರಮಾಣಪತ್ರವನ್ನು ನೀಡಿರುತ್ತೇನೆ. ಆ ಪೆನ್ ಡ್ರೈವ್ ನಲ್ಲಿ ಒಂದು clipping 9 ನಿಮಿಷ 35 ಸೆಕೆಂಡುಗಳದ್ದು ಮತ್ತು ಇನ್ನೊಂದು clipping 10 ನಿಮಿಷದ್ದು ಇತ್ತು. ಆ clipping ಗಳು ಕ್ಯಾಮೆರಾ 1 ಮತ್ತು 4 ಕ್ಕೆ ಸಂಬಂಧಿಸಿದ್ದವು. ಒಂದು ಕ್ಯಾಮೆರಾ ಬಾರ್ ಹೊರಗಡೆ ಮತ್ತು ಇನ್ನೊಂದು ಕ್ಯಾಮೆರಾ ಕ್ಯಾಷ್ ಕೌಂಟರ್ ಹತ್ತಿರ ಇತ್ತು. ಸದರಿ ವಿಡಿಯೋ clipping ಗಳನ್ನು ನಾನೇ ಕಾಪಿ ಮಾಡಿ ಇಟ್ಟಿದ್ದೆ. ಆ ವಿಡಿಯೋ clipping ಗಳು ದಿ. 08.07.2024 ಕ್ಕೆ ಸಂಬಂಧಿಸಿದ್ದವು. ಆ ದಿನ ಪೋಲೀಸರು ನಾನು ಪೆನ್ ಡ್ರೈವ್ ಕೊಟ್ಟಾಗ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸೀಲ್ ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

3. ಆ ಎರಡು ವಿಡಿಯೋ clipping ಗಳಲ್ಲಿ ಏನು ಇತ್ತು ಎಂದು ನನಗೆ ಗೊತ್ತು. ರೇಣುಕಾ ಸ್ವಾ ಮಿ ನಮ್ಮ ಅಂಗಡಿಗೆ ಬಂದು ಹೋಗಿರುವುದು ಮೊದಲು ನನಗೆ ಗೊತ್ತಿರಲಿಲ್ಲ . ಟಿ ವಿ ಯಲ್ಲಿ ರೇಣುಕಾ ಸ್ವಾ ಮಿಯ ಬಗ್ಗೆ ನೋಡಿದ ನಂತರ ಹಾಗೂ ನೋಟೀಸು ಕೊಟ್ಟ ನಂತರ ನನಗೆ ಈ ವಿಷಯ ಗೊತ್ತಾಯಿತು. ಸದರಿ ವಿಡಿಯೋ clipping ಗಳಲ್ಲಿ ರೆಣುಕಾ ಸ್ವಾ ಮಿ ನಮ್ಮ ಬಾರ್ ನ ಒಳಗಡೆ ಎಂಟ್ರಿ ಆಗಿರುವುದು, ಮಧ್ಯ ಮತ್ತು ಸ್ನಾಕ್ಸ್ ಕೊಂಡಿರುವುದು, ಫೋನ್ ಪೇನಲ್ಲಿ ಹಣ ಸಂದಾಯ ಮಾಡಿರುವುದು ಹಾಗೂ ಹೊರಗೆ ಹೊಗುತ್ತಿರುವುದು ಕಂಡಿತ್ತು. ರೇಣುಕಾ ಸ್ವಾ ಮಿಯ ಜೊತೆ 4 ಜನ ಬಂದಿದ್ದರು. ಆ ವಿಡಿಯೋ clipping ಗಳನ್ನು ಮತ್ತೆ

ನೋಡಿದರೆ ನಾನು ಗುರುತಿಸಬಲ್ಲೆ.

4. ಈ ಹಂತದಲ್ಲಿ ಪೆನ್ ಡ್ರೈವ್ ನ್ನು ಪ್ಲೇ ಮಾಡಿ ವಿಡಿಯೋ ವನ್ನು ಸಾಕ್ಷಿಗೆ ತೋರಿಸಲು ಮಾನ್ಯ ವಿಶೇಶ ಅಭಿಯೋಜನಾಧಿಕಾರಿಯವರು ಕೋರಿಕೊಂಡಿದ್ದು ಅದರಂತೆ ನಿಪಿ-111 ಪೆನ್ ಡ್ರೈವ್ ನ್ನು Right Blocker ಮೂಲಕ ತೆರೆದ ನ್ಯಾಯಾಲಯದಲ್ಲಿ ಪ್ಲೇ ಮಾಡಲಾಯಿತು.

5. At this stage, Ld. Sr. Counsel for A2 objected for recording the answer of the witness on the ground that this witness is only a witness handing over the pen drive to the investigation officer and he is not the witness to the contents of the pen drive. Therefore, he cannot view and depose about the contents of the pen drive.

6. Learned Spl. PP submitted that he is the Manager of the Bar and his movements are seen in the video clippings and he is the one who has copied the clippings in the pen drive and issued certificate u/S 65B of Evidence Act.

7. In this regard a details order is already a detailed orders passed on 24.06.2026. Relaying upon the said order, the witness is permitted to depose with regard to contents of the video clippings. Hence, objections are over ruled.

8. Video Clipping No.1 is played.

ಇದರಲ್ಲಿ ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್ ಕಾಣುತ್ತಿದ್ದು. ಇದು 1 ನೇ ಕ್ಯಾಮೂರಾಗೆ ಸಂಬಂಧಿಸಿದೆ. ಈಗ ದಿ. 08.06.2024 ಸಮಯ 11:22:24a.m ಗೆ 4 ಜನ, ರೇಣುಕಾ ಸ್ವಾಮಿ ಮತ್ತು ಇತರರು ಬಾರ್ ಒಳಗೆ ಬರುವುದು ಕಾಣುತ್ತಿದೆ. ಆ ಸಮಯದಲ್ಲಿ, ಆ ದಿನ ನನಗೆ ಇವರು ಯಾರು ಎಂದು ಗೊತ್ತಿರಲಿಲ್ಲ. ಈಗ ವಿಡಿಯೋದಲ್ಲಿ ಕಾಣುತ್ತಿರುವ ವ್ಯಕ್ತಿಗಳು ಯಾರು ಎಂದು ಗೊತ್ತೇ ? ಎಂದು ಕೇಳಿದಾಗ

9. At this stage, learned counsel for accused No.2 objected to question this to the witness as it is a leading question and witness had already answered.

10. Learned SPP submits its not a leading question and it is only asked him regarding identity of the persons.

The witness has to say what ever he knows about the

case and also contents of the clippings. Hence, objections are ruled.

11. ಪೋಲೀಸರು ಅಂದರೆ ವಿನಾಯಕ್ ವಿಡಿಯೋ clippings ಕೇಳಿದಾಗ ಅವರು ರೇಣುಕಾಸ್ವಾಮಿ, ಜಗದೀಶ್ ಅನುಕುಮಾರ್ ಮತ್ತು ರಾಘವೇಂದ್ರ ಇವರು 4 ಜನ ಬಂದಿದ್ದರು ಎಂದು ಹೇಳಿದರು. ನಾನು ಪೇಪರ್ ಮತ್ತು ಟಿ ವಿ ಯಲ್ಲಿ ಬಂದ ನಂತರ ಇವರು ಹೆಸರುಗಳು ನನಗೆ ಗೊತ್ತಾಗಿರುತ್ತದೆ. ದಿ. 08.06.2024 ರ ಸಮಯ 11.22.44 ವಿಡಿಯೋದಲ್ಲಿ ಯಾರು ಯಾರು ಇದ್ದಾರೆ ಎಂದು ನನಗೆ ಗುರುತಿಸಲು ಆಗುತ್ತದೆ. ಬಿಳಿ ಬಣ್ಣದ ಟೀ ಶರ್ಟ ಹಾಕಿಕೊಂಡ ವ್ಯಕ್ತಿ ಅನುಕುಮಾರ್ , ಕಪ್ಪು ಬಣ್ಣದ ಶರ್ಟ ಹಾಕಿಕೊಂಡ ವ್ಯಕ್ತಿ ಜಗದೀಶ್ ಆಗಿರುತ್ತಾನೆ , ನೀಲಿ ಬಣ್ಣದ ಶರ್ಟ ಹಾಕಿಕೊಂಡ ವ್ಯಕ್ತಿ ರಾಘವೇಂದ್ರ ಮತ್ತು ಕ್ರಿಂ ಕಲರ್ ಶರ್ಟ ಹಾಕಿಕೊಂಡ ವ್ಯಕ್ತಿ ರೇಣುಕಾ ಸ್ವಾಮಿ ಆಗಿರುತ್ತಾರೆ.

12. ದಿ. 08.06.2024 ಸಮಯ 11.23.50 a.m. ನಿಂದ ಮುಂದೆ ಬಿಯರ್ ಮತ್ತು ಸ್ನಾಕ್ಸ್ ಕೊಂಡಿರುತ್ತಾರೆ ಮತ್ತು ಫೋನ್ ಪೇ ಮಾಡಿರುತ್ತಾರೆ. ಅವರು ಫೋನ್ ಪೇನ್ನು ಸ್ಕಾನ್ ಮಾಡಿ ರೂ. 640 ಹಣ ಸಂದಾಯ ಮಾಡಿರುತ್ತಾರೆ. ದಿ. 08.06.2024 ಸಮಯ 11.25.25 a.m. ನಂತರ ಅನುಕುಮಾರ್ ಮತ್ತು ಜಗಧೀಶ್ ವಾಶ್ ರೂಂ ನಿಂದ ಹೊರಗೆ ಬಂದಿರುತ್ತಾರೆ. ಬಿಯರ್ ಮತ್ತು ಸ್ನಾಕ್ಸ್ ನ್ನು ಪಾರ್ಸಲ್ ತೆಗೆದುಕೊಂಡು ಹೋಗಿರುತ್ತಾರೆ. ದಿ. 08.06.2024 ಸಮಯ 11.25.36 ರ ನಂತರ ನಮ್ಮ ಕ್ಯಾಷಿಯರ್ ಮಂಜುನಾಥ್ ಕೌಂಟರ್ ನಿಂದ ಹೊರಗಡೆ ಬಂದು ಹ್ಯಾಂಡ್ ವಾಶ್ ಮಾಡಿಕೊಳ್ಳಲು ಬಂದಿರುತ್ತಾರೆ. ಆ 4 ಜನ ಬಿಯರ್ ಮತ್ತು ಸ್ನಾಕ್ಸ್ ನ್ನು ಪಾರ್ಸಲ್ ತೆಗೆದುಕೊಂಡು ಹೋಗುವುದು ಕಾಣುತ್ತಿದೆ. ದಿ. 08.06.2024 ಸಮಯ

11.26.31 ರ ನಂತರ ನಾನು ಬಾರ್ ಒಳಗಡೆ ಬಂದು ಕೌಂಟರ್ ಕಡೆಗೆ ಹೋಗಿರುತ್ತೇನೆ, ಅವರು ಹೋದ ನಂತರ.

13. ದಿ. 08.06.2024 ಸಮಯ 11.29.24 ಕ್ಕೆ ನಾನು ಕ್ಯಾಶ್ ಕೌಂಟರ್ ನಿಂದ ಹೊರಗಡೆ ಬರುತ್ತಿರುವುದು ಕಾಣುತ್ತಿದೆ. ದಿ. 08.06.2024 ಸಮಯ 11.29.40 ಕ್ಕೆ ಕ್ಯಾಷಿಯರ್ ಮಂಜುನಾಥ್ ತಿಂಡಿ ತಿನ್ನುತ್ತಿದ್ದು ಅವರು ಹೊರಗಡೆ ಬಂದಾಗ ನಾನು ಒಳಗಡೆ ಹೋಗಿದ್ದೇನೆ.

**(ಈ ಹಂತದಲ್ಲಿ ನ್ಯಾಯಾಲಯದ ಸಮಯ 5 ಗಂಟೆ ಆಗಿದ್ದರಿಂದ ಹಾಗೂ ಉಳಿದ ಪ್ರಕರಣಗಳ ವಿಚಾರಣೆ ಭಾಕಿ ಇರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು. )**

ಸಮಯ 5.00.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**ದಿನಾಂಕಃ01.07.2026 ರಂದು ಮಧ್ಯಹ್ನ 12.10 ಗಂಟೆಗೆ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ವಿಶೇಷ ಪಿಪಿ ರವರಿಂದಃ**

2nd Clipping played in the open court.

14. ಈ ವಿಡಿಯೋ ಕ್ಲಿಪ್ಪಿಂಗ್ ಬಾರ್ ಅಂಡ್ ರೆಸ್ಟೋರೆಂಟ್‌ನ 4 ನೇ ಕ್ಯಾಮರಾಗೆ ಸಂಬಂದಿಸಿದ್ದು. ಸದರಿ ಕ್ಯಾಮರಾವನ್ನು ನಮ್ಮ ಬಾರಿನ ಹೊರಗ ಭಾಗದಲ್ಲಿ ಅಳವಡಿಸಿದ್ದೇವೆ. ದಿಃ08.06.2024 ರಂದು ಸಮಯ 11:22:13 ಗೆ ನಾಲ್ಕು ಜನ ಬಾರಿನ ಒಳಗೆ ಬರುತ್ತಿದ್ದಾರೆ. ಸದರಿ ನಾಲ್ಕು ಜನ ಯಾರು ಎಂದು ನನಗೆ ಗೊತ್ತು. ಅವರು ರೇಣುಕಾಸ್ವಾಮಿ, ಅನುಕುಮಾರ್, ರಾಘವೇಂದ್ರ ಮತ್ತು ಜಗದೀಶ್ ಎಂದು.

15. ಸಮಯ 11:25:44 ಗೆ ನಾಲ್ಕು ಜನ ಮಧ್ಯವನ್ನು ಪಾರ್ಸಲ್ ತೆಗೆದುಕೊಂಡು ನಮ್ಮ ಬಾರ್ ನಿಂದ ಹೊರಗೆ ಹೋಗುತ್ತಿದ್ದಾರೆ. ಸಮಯ 11:26:29 ಗೆ ನಾನು ಬಾರಿನ ಒಳಗೆ ಬರುತ್ತಿದ್ದೇನೆ.

16. ನಾನು ಪೊಲೀಸರಿಗೆ ಈ ಮೇಲೆ ತೋರಿಸಿದ ಎರಡು ಕ್ಲಿಪ್ಪಿಂಗ್ ಗಳನ್ನು ಪೆನ್ ಡ್ರೈವ್‌ನಲ್ಲಿ ಹಾಕಿ ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ಕೊಟ್ಟಿರುವ ಪೆನ್ ಡ್ರೈವ್‌ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ಪೆನ್ ಡ್ರೈವ್‌ನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೆನ್ ಡ್ರೈವ್‌ನ್ನು ಈಗಾಗಲೇ ನಿ.ಪಿ.111 ಎಂದು ಗುರುತಿಸಲಾಗಿದೆ. ಆ ದಿನ ಪೊಲೀಸರು ಬರೆದ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ

ಈಗ ದಿಃ12.07.2024 ರಂದು ಮಾಡಿದ ಪಂಚನಾಮೆಯನ್ನು ತೋರಿಸಿದಾಗ, ಅದನ್ನು ಮತ್ತು ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.112 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.112(ಬಿ)** ಎಂದು ಗುರುತಿಸಲಾಯಿತು.

17. ನಾನು ಪೆನ್ ಡ್ರೈವ್‌ನೊಂದಿಗೆ ನೀಡಿದ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ 65 ಬಿ ಸರ್ಟಿಫಿಕೇಟ್‌ನ್ನು ತೋರಿಸಿದಾಗ, ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ 65 ಬಿ ಸರ್ಟಿಫಿಕೇಟ್‌ನ್ನು **ನಿ.ಪಿ.115** ಎಂದು ಮತ್ತು ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.115(ಎ)** ಎಂದು ಗುರುತಿಸಲಾಯಿತು. ಇಷ್ಟನ್ನು ಬಿಟ್ಟು ಬೇರೆ ಏನನ್ನು ಮಾಡಿರುವುದಿಲ್ಲ.

**ಪಾಟಿಸವಾಲು 2 ನೇ ಆರೋಪಿ ಪರ ಪದಾಂಕಿತ ಹಿರಿಯ ಶ್ರೀ. ಹೆಚ್.ಪಿ ವಕೀಲರಿಂದಃ**

18. ನಾನು ಬಿ.ಕಾಂ ಪದವೀಧರ. ದುರ್ಗಾ ಬರ್ ಅಂಡ್ ರೆಸ್ಟೋರೆಂಟ್‌ನ ಮಾಲೀಕರು ಶ್ರೀನಿವಾಸ ಮೂರ್ತಿ. ಸದರಿ ಬಾರಿಗೆ ನಾನು ಕ್ಯಾಶಿಯರ್ ಆಗಿ ನೇಮಕವಾದ ಬಗ್ಗೆ ನನ್ನ ಬಳಿ ದಾಖಲೆ ಇದೆ. ಸದರಿ ದಾಖಲೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಹಾಗೂ ಈ ದಿನ ನ್ಯಾಯಾಲಯಕ್ಕೆ ತಂದಿರುವುದಿಲ್ಲ. ಸದರಿ ದಾಖಲೆ ನೌಕರನಾಮ ಆಗಿರುತ್ತದೆ. ಸದರಿ ದಾಖಲೆಯನ್ನು ದುರ್ಗಾ ಬಾರಿನ ಮಾಲೀಕರಾದ ಶ್ರೀವಾಸ

ಮೂರ್ತಿರವರು ನೀಡಿಲ್ಲ ಎಂದರೆ ಸರಿ. ನನ್ನ ಕೆಲಸದ ಅವಧಿಯ ಬಗ್ಗೆ ಹಾಜರಾತಿ ಪುಸ್ತಕವನ್ನು ನಮ್ಮ ದುರ್ಗಾ ಬಾರ್ ಅಂಡ್ ರೆಸ್ಟೊರೆಂಟ್‌ನಲ್ಲಿ ಇಟ್ಟಿರುವುದಿಲ್ಲ.

19. ಕ್ಯಾಶ್ ಕೌಂಟರ್ ನಲ್ಲಿ physical mode or digital mode ನಲ್ಲಿ ರಿಜಿಸ್ಟರ್ ಗಳನ್ನು ನಾವು ಮೇಂಟೇನ್ ಮಾಡಿರುವುದಿಲ್ಲ. ಯಾವುದೇ ಬಿಲ್ ಬುಕ್‌ಗಳನ್ನು ಸಹ ಮೆಂಟೇನ್ ಮಾಡಿರುವುದಿಲ್ಲ. ಇಂತಹ ಗ್ರಾಹಕರು ಇಂತಹ ಸಮಯಕ್ಕೆ ಬಂದು ಹೋಗಿದ್ದಾರೆ ಎಂದು ತೋರಿಸಲು ನಮ್ಮ ಕ್ಯಾಶ್ ಕೌಂಟರ್ ನಲ್ಲಿ ಯಾವುದೇ ದಾಖಲೆ ಇಲ್ಲ ಎಂದರೆ, ಸಾಕ್ಷಿ ಮಂಜುನಾಥ ಎಂಬುವವರು ಕ್ಯಾಶ ಕೌಂಟರ್ ನಲ್ಲಿ ಇರುತ್ತಿದ್ದು ಅವರ ಮೊಬೈಲ್ ಗೆ ಸ್ಕ್ಯಾನ್ ಮಾಡಿ ಪೇಮೆಂಟ್ ಮಾಡುತ್ತಾರೆ ಎನ್ನುತ್ತಾರೆ.

ಪ್ರಶ್ನೆಃ ನೀವು ಸದರಿ ಬಾರಿನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ. ಇದಕ್ಕೆ ಏನು ಹೇಳುವಿರಿ?

ಉತ್ತರಃ ಫೋನ್ ಪೇ ಇದೆ.

20. ಫೋನ್ ಪೇದಲ್ಲಿ ಹಣ ಸಂದಾಯವಾಗುವ ಬಗ್ಗೆ ಪೊಲೀಸರಿಗೆ ನೀವು ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ, ಸಾಕ್ಷಿ ಮಂಜುನಾಥರವರಿಗೆ ಫೋನ್ ಪೇನಲ್ಲಿ ಹಣ ಸಂದಾಯ ಮಾಡಿದ ಬಗ್ಗೆ ದಾಖಲೆ ನೀಡಿದ್ದೆ ಎನ್ನುತ್ತಾರೆ. ಮಂಜುನಾಥರವರು ಫೋನ್ ಪೇ ಬಗ್ಗೆ ದಾಖಲೆ ನೀಡಿದ ಬಗ್ಗೆ ಈ ಪಂಚನಾಮೆಯನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ

ಫೋನ್ ಪೇ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ.

21. ಗ್ರಾಹಕರು ಫೋನ್ ಪೇನಲ್ಲಿ ಹಣ ಸಂದಾಯ ಮಾಡಿದ ಬಗ್ಗೆ ಹಾಗೂ ಅವರು ವಸ್ತುಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲೆ ನೀಡಿರುವುದಿಲ್ಲ. ಮಂಜುನಾಥನ ಫೋನ್‌ಗೆ ಫೋನ್ ಪೇ ಮಾಡಿದ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಸಿಸಿ ಟಿವಿ ಅಳವಡಿಸಿದ ಬಗ್ಗೆ ನಾನು ಯಾವುದೇ ದಾಖಲೆ ನೀಡಿರುವುದಿಲ್ಲ. ಪೊಲೀಸರು ನಮ್ಮ ಬಾರಿಗೆ ಬಂದಾಗ, ಕ್ಯಾಮರಾ ನಂ.1 ಮತ್ತು ಕ್ಯಾಮರಾ ನಂ.4 ಇಂತಹ ಸ್ಥಳದಲ್ಲಿ ಇದೆ ಎಂದು ನಕ್ಷೆ ತಯಾರಿಸಿರುವುದಿಲ್ಲ, ಹಾಗೂ ಆ ಕ್ಯಾಮರಾಗಳ ಫೋಟೋಗಳನ್ನು ಸಹ ತೆಗೆದಿರುವುದಿಲ್ಲ.

22. ನಮ್ಮ ಬಾರಿನಲ್ಲಿ ಡಿವಿಆರ್ ಮತ್ತು ಸ್ಕ್ರೀನ್ ಇದ್ದ ಸ್ಥಳದ ಪೊಲೀಸರು ಫೋಟೋವನ್ನು ತೆಗೆದಿರುವುದಿಲ್ಲ. ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಸಿಸಿ ಟಿವಿ ಕ್ಯಾಮರಾಗಳನ್ನು ಯಾವ (Technician) ಅಳವಡಿಸಿದ್ದರು ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ಬಾರ್ ಅಂಡ್ ರೆಸ್ಟೋರೆಂಟ್‌ಗೆ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮರಾಗಳನ್ನು ಸರ್ವೀಸ್ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

23. ಪೊಲೀಸರು ನೋಟೀಸ್ ನೀಡಿದ ನಂತರ, ನಾನು ನಮ್ಮ ಮಾಲೀಕರಿಗೆ ಭೇಟಿ ಮಾಡಿರುವುದಿಲ್ಲ. ಪೊಲೀಸರು ನೋಟೀಸ್ ನೀಡಿದ ನಂತರ, ನಾನು ಬಾರ್ ಮಾಲೀಕರಿಗೆ ಹೇಳಿ, ಟೆಕ್ನಿಷಿಯನ್ ಮತ್ತು ಸರ್ವೀಸ್

ಮೆನ್ ಗೆ ಕರೆಸಿ, ಅದರಲ್ಲಿ ಇರುವ ದೃಶ್ಯಾವಳಿಗಳನ್ನು ಡೌನ್ ಲೋಡ್ ಮಾಡಿ ಕೊಳ್ಳಲು ಕೇಳಿರುವುದಿಲ್ಲ ಎಂದರೆ ಸರಿ. ಈ ಹಿಂದೆ, ಈ ಸಿಸಿ ಟಿವಿಗಳಲ್ಲಿ ಏನೇನು ರೇಕಾರ್ಡ ಆಗಿದೆ ಎಂದು ನಾನು ಈ ಮುಂಚೆ ನೋಡಿರುವುದಿಲ್ಲ.

24. ನಮ್ಮ ಬಾರಿನಲ್ಲಿ ಟಿವಿ ಇರುವುದಿಲ್ಲ. ನಾನು ಟಿವಿ ನೋಡುವುದಿಲ್ಲ. ಪೊಲೀಸರು ನನಗೆ ನೋಟೀಸ್‌ನ್ನು ನಮ್ಮ ಬಾರಿಗೆ ಬಂದು ಕೊಟ್ಟಿರುತ್ತಾರೆ. ನನಗೆ ಈ ನೋಟೀಸ್‌ನ್ನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಠಾಣಾಧಿಕಾರಿಯಾದ ವಿನಾಯಕ್ ರವರು ನೀಡಿರುತ್ತಾರೆ. ಈ ನೋಟೀಸ್‌ನ್ನು ಕೊಡುವಾಗ, ನಮ್ಮ ಬಾರಿನಲ್ಲಿ ಕ್ಯಾಮರಾ ಇರುವ ಬಗ್ಗೆ ಮತ್ತು ಅದರಲ್ಲಿ ಏನು ದೃಶ್ಯಾವಳಿಗಳು ಇವೆ ಎಂದು ಠಾಣಾಧಿಕಾರಿಯವರು ಪರಿಶೀಲನೆ ಮಾಡಿರುವುದಿಲ್ಲ.

25. ನನಗೆ ಈ ನೋಟೀಸಿನಲ್ಲಿ ನಮ್ಮ ಬಾರಿನ ಸಿಸಿ ಟಿವಿ ಕ್ಯಾಮರಾದಲ್ಲಿ ಇರುವ ದೃಶ್ಯಾವಳಿಗಳನ್ನು ತೆಗೆದುಕೊಂಡು ತನಿಖಾಧಿಕಾರಿಯವರ ಮುಂದೆ ಕೂಡಲೇ ಹಾಜರಾಗಬೇಕು ಎಂದು ತಿಳಿಸಿದೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ನಲ್ಲಿ ಠಾಣಾಧಿಕಾರಿಗಳ ಮುಂದೆ ಕೂಡಲೇ ಹಾಜರಾಗಬೇಕು ಎಂದು ಬರೆಯಲಾಗಿದೆ ಎಂದರೆ, ಸಾಕ್ಷಿ ಹಾಗೆ ಬರೆದಿಲ್ಲ ಎನ್ನುತ್ತಾರೆ. ಸದರಿ ನೋಟೀಸ್‌ನಲ್ಲಿ ನೀವು ಸಿಸಿ ಟಿವಿ ಕ್ಯಾಮರಾದಲ್ಲಿ ಇರುವ ದೃಶ್ಯಾವಳಿಗಳನ್ನು ಇಟ್ಟುಕೊಂಡಿರಿ, ನಾವು ಬಂದು ತೆಗೆದುಕೊಂಡು ಹೋಗುತ್ತೇವೆ ಎಂದು ಬರೆದಿಲ್ಲ ಎಂದರೆ ಸರಿ.

26. ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಪೊಲೀಸರು ನನಗೆ ನೋಟೀಸ್ ಕೊಟ್ಟ ನಂತರ, ನಾನು ಈ ನೋಟೀಸ್‌ನ್ನು ನಮ್ಮ ಮಾಲೀಕರಿಗೆ ತೋರಿಸಿರುವುದಿಲ್ಲ. ಪೊಲೀಸರು ನೋಟೀಸ್ ಕೊಟ್ಟು ಹೋಗುವಾಗ, ಈ ಕೇಸಿನ ಬಗ್ಗೆ ನಾನು ಅವರನ್ನು ವಿಚಾರಿಸಿರುವುದಿಲ್ಲ. ಈ ಪ್ರಕರಣದ ಬಗ್ಗೆ ಪೊಲೀಸರು ಬರುವ ಮುಂಚೆ ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿ.

27. ಕ್ಲಿಪ್ಪಿಂಗ್ ನಂ.1 ಮತ್ತು 2ನ ದೃಶ್ಯಾವಳಿಗಳನ್ನು ನಾನು ನೋಡಿದರಲ್ಲಿ ಜನರು ಓಡಾಡುವ ಸಮಯದಲ್ಲಿ ನಾನು ಬಾರಿನಲ್ಲಿ ಇರಲಿಲ್ಲ ಎಂದರೆ ಸರಿ. ಈ ಕ್ಲಿಪ್ಪಿಂಗ್ ಗಳಲ್ಲಿ ಓಡಾಡುವ ನಾಲ್ಕು ಜನ ವ್ಯಕ್ತಿಗಳು, ನಾನು ಸದರಿ ದೃಶ್ಯಾವಳಿಗಳನ್ನು ನೋಡುವ ಮೊದಲು ಯಾರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ನಮ್ಮ ಬಾರ್ ಅಂಡ್ ರೆಸ್ಟೊರೆಂಟ್ ಗೆ ಹಲವಾರು ಜನ ಗ್ರಾಹಕರು ಬಂದು ಹೋಗುತ್ತಿದ್ದು, ಇಂತಹ ಗ್ರಾಹಕರೆ ಇಷ್ಟು ಸಮಯಕ್ಕೆ ಬಂದು ಹೋಗಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.

28. ದೃಶ್ಯಾವಳಿಗಳನ್ನು ಡೌನ್ ಲೋಡ್ ಮಾಡಿಕೊಡಲು ಪೊಲೀಸರು ನನಗೆ ಪೆನ್ ಡ್ರೈವ್ ನೀಡಿರುವುದಿಲ್ಲ. ನಾನು ಪೆನ್ ಡ್ರೈವ್ ಕೊಂಡ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ಈ ದೃಶ್ಯಾವಳಿಗಳನ್ನು ಯಾವಾಗ ಮತ್ತು ಹೇಗೆ ಮಾಡಿರುತ್ತೇನೆ ಎಂದು ಬರೆದಿಟ್ಟು ಕೊಂಡಿಲ್ಲ ಎಂದರೆ ಸರಿ. ಯಾವುದಲೇ System ನಲ್ಲಿ ಯಾವುದೇ ದೃಶ್ಯಾವಳಿಗಳನ್ನು ಡೌನ್ ಲೋಡ್ ಮಾಡಡಲು

Access ಮಾಡಿದಾಗ, ಸದರಿ ಕುರಿತು ದಿನಾಂಕ, ಸಮಯ ಮತ್ತು ಅವಧಿ ಸದರಿ ಸಿಸ್ಟಮ್ ನಲ್ಲಿ ರೆಕಾರ್ಡ ಆಗಿರುತ್ತದೆ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

29. ಯಾವುದೇ ಸಿಸಿ ಟಿವಿ ಮತ್ತು ಡಿವಿಆರ್ ಗಳನ್ನು ಆಕ್ಸಿಸ್ ಮಾಡಲು ಪಾಸ್‌ವರ್ಡ ಬೇಕಾಗುತ್ತದೆ ಎಂದರೆ ಸರಿ. ನಮ್ಮ ಸಿಸಿ ಟಿವಿಗೆ ನಾನು 'L' shape pattern ಪಾಸ್ ವರ್ಡ ಇಟ್ಟಿರುತ್ತೇನೆ ಹಾಗೂ ಸಂಖ್ಯೆಗಳ ಪಾಸ್ ವರ್ಡ ಇಟ್ಟಿರುವುದಿಲ್ಲ.

ಪ್ರಶ್ನೆಃ ಯಾವುದೇ ಸಿಸಿ ಟಿವಿ ಅಥವಾ ಡಿವಿಆರ್ ಗಳನ್ನು ಆಕ್ಸಿಸ್ ಮಾಡಲು 7 ಸಂಖ್ಯೆಗಳ ಪಾಸ್ ಕೋಡ್ ಇರುತ್ತದೆ. ಇದಕ್ಕೆ ಏನು ಹೇಳುವಿರಿ?

ಉತ್ತರಃ ನನಗೆ ಗೊತ್ತಿಲ್ಲ.

30. ಪಾಸ್ ವರ್ಡ ಇಲ್ಲದೇ ಸಿಸಿ ಟಿವಿ ಮತ್ತು ಡಿವಿಆರ್ ಆಕ್ಸಿಸ್ ಮಾಡಲು ಆಗುವುದಿಲ್ಲ ಎಂದರೆ, ಸಾಕ್ಷಿ ನಾನು ಪ್ಯಾಟರ್ನ ಇಟ್ಟಿರುತ್ತೇನೆ ಎನ್ನುತ್ತಾರೆ. ಪಾಸ್ ವರ್ಡ ಇಲ್ಲದೇ ಸಿಸಿ ಟಿವಿ ಮತ್ತು ಡಿವಿಆರ್ ಆಕ್ಸಿಸ್ ಮಾಡಲು ಆಗುವುದಿಲ್ಲ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಾಸ್ ವರ್ಡ ತಪ್ಪಾಗಿದ್ದರೆ ಅದು ಕೆಂಪು ಬಣ್ಣದಲ್ಲಿ "Incorrect Password" ಎಂದು ತೋರಿಸುತ್ತದೆ ಎಂದರೆ ನನಗೆ ಗೊತ್ತಿಲ್ಲ.

31. ಇಂತಹ ಸಮಯದಲ್ಲಿಯೇ ಡೌನ್ ಲೋಡ್ ಮಾಡಲಾಗಿದೆ ಎಂದು ಸದರಿ ಸಿಸ್ಟಮ್‌ನಲ್ಲಿ ರೆಕಾರ್ಡ ಇರುತ್ತದೆ ಹಾಗೂ ಬೇರೆಯವರು ಆಕ್ಸಿಸ್

ಮಾಡಿದರೆ, ಆಗಲು ಸಹ "someone is accessing” ಎಂದು ಅಲರ್ಟ ಮೆಸೇಜ್ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಡಿವಿಆರ್ ಹೇಗೆ function ಆಗುತ್ತದೆ ಎಂದು technology ಬಗ್ಗೆ ನನಗೆ ಗೊತ್ತಿಲ್ಲ.

32. ಪ್ರತಿ ಒಂದು ಡಿವಿಆರ್ ಗೆ ಒಂದು ಬಾಕ್ಸ ಕೊಡುತ್ತಾರೆ ಎಂದರೆ ಸರಿ. ಸಿಸಿ ಟಿವಿ ಕ್ಯಾಮರಾಗೆ ಸದರಿ ಡಿವಿಆರ್ ಮೇನ್ ಸೋರ್ಸ ಆಗಿರುತ್ತದೆ ಎಂದರೆ, ಸಾಕ್ಷಿ ಅದು hard disk ಆಗಿರುತ್ತದೆ ಎನ್ನುತ್ತಾರೆ. Hard Disk ನ್ನು ತೆರೆದು ನೋಡಿ, ಯಾವುದೇ ದೃಶ್ಯಾವಳಿಗಳನ್ನು ನೋಡಿದಾಗ, ಅದು ಡೌನ್ ಲೋಡ್ ಮಾಡಿದ ಬಗ್ಗೆ ಆ ಸಮಯದಲ್ಲಿ ಸಿಸಿ ಟಿವಿ ಕೆಲಸ ಮಾಡುತ್ತಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ Hard Disk ಆಕ್ಸಿಸ್ ಆಗಿದೆ ಎಂದು ರೆಕಾರ್ಡ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

33. ಪೊಲೀಸರಿಗೆ ನಾನೇ ಈ ದೃಶ್ಯಾವಳಿಗಳನ್ನು ತೆಗೆದುಕೊಳ್ಳಿ ಎಂದು ಹೇಳಿರುವುದಿಲ್ಲ. ನಾನು ದೃಶ್ಯಾವಳಿಗಳನ್ನು ಡೌನ್ ಲೋಡ್ ಮಾಡಲು ಬೇರೆ ಯಾವುದೇ technician ಸಹಾಯ ಪಡೆದಿರುವುದಿಲ್ಲ. ನಾನು ಇಂತಹ ಸಮಯದಲ್ಲಿ, ಈ ದೃಶ್ಯಾವಳಿಗಳನ್ನು ಡೌನ್ ಲೋಡ್ ಮಾಡಿದ್ದೇನೆ ಎಂದು ದಿನಾಂಕ ಮತ್ತು ಸಮಯವನ್ನು, ಡಿವಿಆರ್ ಮತ್ತು ಡೆಸ್ಕಟಾಪ್‌ನಲ್ಲಿ ರೇಕಾರ್ಡ ಮಾಡಿ ಇಟ್ಟಿರುವುದಿಲ್ಲ. ಈ ದೃಶ್ಯಾವಳಿಗಳನ್ನು ನನ್ನ ಡಿವಿಆರ್ ಮತ್ತು ಡೆಸ್ಕಟಾಪ್ ನಲ್ಲಿ ಸೇವ್ ಮಾಡಿ ಇಟ್ಟಿರುವುದಿಲ್ಲ. ಈ ದಿನ, ಈ ದೃಶ್ಯಾವಳಿಗಳು ನಮ್ಮ ಡಿವಿಆರ್ ಮತ್ತು ಡೆಸ್ಕಟಾಪ್‌ನಲ್ಲಿ ಸೇವ್ ಮಾಡದೇ ಇದ್ದ ಕಾರಣ ಯಾವುದೇ

ದಾಖಲೆ ಇಲ್ಲ ಎಂದರೆ ಸರಿ.

34. ಈ ದೃಶ್ಯಾವಳಿಗಳಿಗೆ ಮತ್ತು ಪೆನ್ ಡ್ರೈವ್‌ಗೆ ನಾನು ನನ್ನದೇ ಆದ ಗುರುತನ್ನು ಕೊಟ್ಟಿರುವುದಿಲ್ಲ. ಡೆಸ್ಕಟಾಪ್‌ನಿಂದಾಗಲೀ ಅಥವಾ ಡಿವಿಆರ್ ನಿಂದಾಗಲೀ, ಪೆನ್ ಡ್ರೈವ್‌ಗೆ ನೇರವಾಗಿ ಡೌನ್ ಲೋಡ್ ಮಾಡಲು ಆಗುವುದಿಲ್ಲ ಎಂದರೆ ಸರಿ.

**ಪ್ರಶ್ನೆ:** ನೀವು ಯಾವ ಮೋಡ್ ಅಥವಾ ವಿಧಾನ ಉಪಯೋಗಿಸಿ, ಈ ದೃಶ್ಯಾವಳಿಗಳನ್ನು ಪೆನ್ ಡ್ರೈವ್‌ಗೆ ಡೌನ್ ಲೋಡ್ ಮಾಡಿದ್ದೀರ ಎಂದು ಈಗ ಹೇಳಲು ಆಗುವುದಿಲ್ಲ ಎಂದರೆ?

**ಉತ್ತರ:** ಸರಿ.

35. ಬಂದ ಪೊಲೀಸರಲ್ಲಿ ಯಾರು ಟೆಕ್ನಿಷಿಯನ್ ಇರಲಿಲ್ಲ. ನಾನು ಪ್ರಮಾಣ ಪತ್ರವನ್ನು ನನ್ನ ಕೈಯಾರೆ ಬರೆದು ಕೊಟ್ಟಿರುವುದಿಲ್ಲ. ಇಲ್ಲಿ ಹಾಜರುಪಡಿಸಿದ ಪ್ರಮಾಣ ಪತ್ರ-ನಿ.ಪಿ.115, ಇದು ಪೊಲೀಸರು ತಯಾರು ಮಾಡಿ ಕೊಟ್ಟಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಕೈಬರಹದಲ್ಲಿ ಸದರಿ ಪ್ರಮಾಣ ಪತ್ರವನ್ನು ಬರೆದುಕೊಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಹೇಗೆ ಬರೆಯಬೇಕು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಇಂತಹ ಪ್ರಮಾಣ ಪತ್ರವನ್ನು ಬರೆಯಬೇಕಾದಾಗ ಏನೇನು ಪರೀಕ್ಷೆ ಮಾಡಬೇಕು ಎಂದು ನನಗೆ ಗೊತ್ತಿಲ್ಲ.

36. ಈ ದೃಶ್ಯಾವಳಿಗಳಲ್ಲಿ ಕಂಡ ನಾಲ್ಕು ವ್ಯಕ್ತಿಗಳ ಹೆಸರನ್ನು ನಿಮಗೆ

ಯಾರು ಹೇಳಿಕೊಟ್ಟಿರುತ್ತಾರೆ ಎಂದರೆ, ಸಾಕ್ಷಿ ನನಗೆ ಯಾರು ಹೇಳಿ ಕೊಟ್ಟಿಲ್ಲ ಎನ್ನುತ್ತಾರೆ. ಸದರಿ ವ್ಯಕ್ತಿಗಳು ನನಗೆ ಗೊತ್ತಿಲ್ಲದವರು ಎಂದರೆ ಸರಿ. ಪೊಲೀಸರು ಈ ದೃಶ್ಯಾವಳಿಗಳನ್ನು ಪ್ಲೇ ಮಾಡಿ ತೋರಿಸಿದಾಗ, ಈ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತೇನೆ. ಗೊತ್ತಿಲ್ಲದೇ ಇರುವ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಗೊತ್ತಿಲ್ಲದೇ ಇರುವ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ, ಆಗುವುದಿಲ್ಲ ಎನ್ನುತ್ತಾರೆ.

37. ಪೊಲೀಸರು ನಮ್ಮ ಬಾರಿಗೆ ಬಂದಾಗ ಈ ಕ್ಲಿಪ್ಪಿಂಗ್ಸಗಳನ್ನು ತೋರಿಸಿರುವುದಿಲ್ಲ. ಪೊಲೀಸರು ಈ ಕ್ಲಿಪ್ಪಿಂಗ್ಸಗಳನ್ನು ನನಗೆ ತೋರಿಸಿರುತ್ತಾರೆ. ಪೊಲೀಸರು ಈ ಗೊತ್ತಿಲ್ಲದ ವ್ಯಕ್ತಿಗಳ ಹೆಸರುಗಳನ್ನು ಹೇಳಿಕೊಟ್ಟಿರುವುದಿಲ್ಲ. ನಾನು ಈ ದೃಶ್ಯಾವಳಿಗಳನ್ನು ನ್ಯಾಯಾಲಯದಲ್ಲಿ ಮೊದಲನೆ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ನಾಲ್ಕು ಜನ ಹೆಸರುಗಳನ್ನು ಎಲ್ಲಿಯೂ ಬರೆದಿಟ್ಟುಕೊಂಡಿರುವುದಿಲ್ಲ. ನಾನು ಕೋರ್ಟಿನಲ್ಲಿ ಅವರ ಹೆಸರುಗಳನ್ನು ಹೇಳಬೇಕು ಎಂದು ಬಾಯಿಪಾಟ ಮಾಡಿಕೊಂಡು ಬಂದಿಲ್ಲ.

38. ಪೊಲೀಸರು ಹೇಳಿಕೊಟ್ಟ ಕಾರಣವೇ, ಇಂತಿಂತಹ ವ್ಯಕ್ತಿಗಳ ಹೆಸರು ಇದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಪದೇ ಪದೇ ಈ ದೃಶ್ಯಾವಳಿಗಳನ್ನು ತೋರಿಸಿ, ಅವರ ಹೆಸರುಗಳನ್ನು ಬಾಯಿಪಾಟು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾನು ಪೊಲೀಸರು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

39. ಪೊಲೀಸರಿಗೆ ನಾನು ಪಂಚನಾಮೆ ಹೇಳಿ ಬರೆಸಿರುವುದಿಲ್ಲ. ಸದರಿ ಪಂಚನಾಮೆಯಲ್ಲಿ ನನಗೆ ಗೊತ್ತಿಲ್ಲದ ಹಲವಾರು ವಿಷಯಗಳನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಈ ಪಂಚನಾಮೆಯನ್ನು ಪೊಲೀಸರು ಟೈಪ್ ಮಾಡಿರುತ್ತಾರೆ ಎಂದರೆ ಸರಿ. ಈ ಪಂಚನಾಮೆಯಲ್ಲಿ ಬರೆದ ಬರವಣಿಗೆ ಸರಿಯಾಗಿದೆ ಎಂದು ನಾನು ಪ್ರತ್ಯೇಕವಾಗಿ ಬರೆದು ದೃಢೀಕರಿಸಿರುಕಿವುದಿಲ್ಲ. ಈ ಪೆನ್ ಡ್ರೈವ್‌ನಲ್ಲಿ ನನ್ನದೇ ಆದ ಯಾವುದೇ ಗುರುತು ಹಾಕಿ ಕೊಟ್ಟಿರುವುದಿಲ್ಲ ಎಂದರೆ ಸರಿ. ಇದೇ ಪೆನ್ ಡ್ರೈವ್‌ನ್ನು ನಾನು ಪೊಲೀಸರಿಗೆ ಕೊಟ್ಟಿದ್ದೆ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.

40. ನಮ್ಮ ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್ ಗೆ ಯಾವುದೇ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್ ಗೆ ಯಾವುದೇ ಸಿಸಿ ಟಿವಿ ಕ್ಯಾಮರಾದ ದೃಶ್ಯಾವಳಿಗಳನ್ನು ಡೌನ್ ಮಾಡಿಕೊಡಿ ಎಂದು ನನಗೆ ನೋಟೀಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.114-ನೋಟೀಸ್ ಗೆ ನನ್ನ ಸಹಿಯನ್ನು ಪೊಲೀಸರು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಕೊಟ್ಟ ನೊಟೀಸ್‌ನ ಪ್ರತಿ ಈಗ ನನ್ನ ಬಳಿ ಇಲ್ಲ. ಪೊಲೀಸರು ಕೊಟ್ಟ ನೋಟೀಸ್‌ನ ಪ್ರತಿಯನ್ನು ತಂದುಹಾಜರುಪಡಿಸಲು ಆಗುವುದಿಲ್ಲ.

41. ನಿ.ಪಿ.114ರ ಪ್ರಕಾರಣ ಪೊಲೀಸರು ನನಗೆ ಯಾವುದೇ

ನೋಟೀಸ್‌ನ್ನು ಕೊಡದೇ ಇದ್ದ ಕಾರಣ, ನಾನು ಹಾಜರುಪಡಿಸಲು ಆಗುವುದಿಲ್ಲ ಎಂದರೆ, ಸಾಕ್ಷಿ ನೋಟೀಸ್ ಕೊಟ್ಟಿರುತ್ತಾರೆ ಎನ್ನುತ್ತಾರೆ. ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್ ಗೆ ಯಾವುದೇ ಸಿಸಿ ಟಿವಿ ಕ್ಯಾಮರಾ ಅಳವಡಿಸಿರುವುದಿಲ್ಲ ಹಾಗೂ ನಾನು ಯಾವುದೇ ದೃಶ್ಯಾವಳಿಗಳನ್ನು ಪೆನ್ ಡ್ರೈವ್ ಡೌನ್ ಲೋಡ್ ಮಾಡಿ ನೀಡಿರುವುಕಿದಿಲ್ಲ ಎಂದರೆ ಸರಿಯಲ್ಲ. ನಾನು ಈ ದೃಶ್ಯಾವಳಿಗಳನ್ನು ಟಿವಿಯಲ್ಲಿ ನೋಡಿರುವುದಿಲ್ಲ. ಕನ್ನಡ ದಿನ ಪತ್ರಿಕೆಗಳಲ್ಲಿ ಈ ದೃಶ್ಯಾವಳಿಗಳನ್ನು ನೋಡಿರುತ್ತೇನೆ. ಆ ದಿನ ಪತ್ರಿಕೆಗಳಲ್ಲಿ ಹೆಸರುಗಳನ್ನು ಬರೆದಿತ್ತು. ಆ ಹೆಸರುಗಳನ್ನು ದಿನಪತ್ರಿಕೆಗಳಲ್ಲಿ ಓದಿದ್ದ ಕಾರಣ, ನನಗೆ ಈ ಪ್ರಕರಣದಲ್ಲಿ ಅವರ ಹೆಸರುಗಳನ್ನು ಹೇಳಲು ಸಹಕಾರ ಮಾಡಿದೆ ಎಂದರೆ ಸರಿಯಲ್ಲ.

42. ನನಗೆ ಪೊಲೀಸರೇ ಅವರ ಹೆಸರುಗಳನ್ನು ಹೇಳಿದ್ದ ಕಾರಣ, ನಾನು ಅವರ ಹೆಸರುಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಕೆಲಸ ಮಾಡುತ್ತಿದ್ದ ಜನರ ಜೊತೆಗೆ ಈ ದಿನಪತ್ರಿಕೆಗಳಲ್ಲಿ ಇದ್ದ ದೃಶ್ಯಾವಳಿಗಳ ಮತ್ತು ವ್ಯಕ್ತಿಗಳ ಕುರಿತು ನಾನು ಚರ್ಚೆ ಮಾಡಿರುವುದಿಲ್ಲ.

43. ದಿಃ08.07.2024 ಮತ್ತು ದಿಃ12.07.2024 ಸಮಯಕ್ಕೆ ಪ್ರತೀ ದಿನ ದಿನಪತ್ರಿಕೆಗಳಲ್ಲಿ ಮತ್ತು ಟಿವಿ ಮಾಧ್ಯಮಗಳಲ್ಲಿ ಈ ಪ್ರಕರಣ ಕುರಿತು ದೃಶ್ಯಾವಳಿಗಳು ಮತ್ತು ಘಟನೆಗಳ ಬಗ್ಗೆ ವಿಷಯಗಳು ಪ್ರಕಟಣೆಯಾಗುತ್ತಿತ್ತು ಎಂದರೆ ಸರಿ. ಕುತೂಹಲದಿಂದ ನಾನು ಕೂಡ ಓದಿದ್ದೇನೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಸ್ವತಃ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಈ

ಪ್ರಕರಣದಲ್ಲಿ ನೆನ್ನೆ ನಾನು ಸಾಕ್ಷಿ ನೀಡುವ ಮೊದಲು ಪೊಲೀಸರು ನನಗೆ ಈ ಪ್ರಕರಣದ ಬಗ್ಗೆ ಬಾಯಿಪಾಟು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ನುಡಿದ ಎಲ್ಲಾ ಸಾಕ್ಷ್ಯ ಸುಳ್ಳು ಎಂದರೆ ಸರಿಯಲ್ಲ.

44. ಆಕರ್ಶ ನನಗೆ ಸುಮಾರು ವರ್ಷದಿಂದ ಪರಿಚಯ. ನನಗೆ ಆಗಾಗ ಅವರು ಮಾತನಾಡಿಸುತ್ತಿದ್ದರೆ ಎಂದರೆ, ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಆಕರ್ಶ ಭೋವಿಪಾಳ್ಯ, ಊರಕೆರೆ ಗ್ರಾಮದವರು. ಈತ ನಿಮಗೆ ನಂಬಿಕೆ ಇರುವ ವ್ಯಕ್ತಿಯೇ ಎಂದರೆ, ಸಾಕ್ಷಿ ಹೌದು ಎನ್ನುತ್ತಾರೆ. ಅವರು ನನಗೆ ನಿಮಗೆ ತಿಳಿಯದೇ ಇರುವ ವಿಷಯ ಹೇಳಿ ಎಂದು ಹೇಳಿಕೊಟ್ಟರೇ ಎಂದರೆ, ಸಾಕ್ಷಿ ಇಲ್ಲ ಎನ್ನುತ್ತಾರೆ. ಅವರು ನಿಮ್ಮ ಹತ್ತಿರ ಬಂದು ಈ ತರಹವೇ ಹೇಳಿ ಎಂದು ಕೇಳಿಕೊಂಡಿಲ್ಲ ಎಂದರೆ ಸರಿ. ಆದರೆ ಈ ವ್ಯಕ್ತಿ ನಿಮಗೆ ಪರಿಚಯದ ಮತ್ತು ನಂಬಿಕಸ್ತ ವ್ಯಕ್ತಿ ಎಂದರೆ ಸರಿ. ಸದರಿ ಆಕರ್ಶ ನನಗೆ ಭಯಪಡಿಸಿಲ್ಲ ಎಂದರೆ ಸರಿ. ಬೇರೆ ಯಾವುದೇ ವ್ಯಕ್ತಿಗಳು ನನಗೆ ಭಯಪಡಿಸಿಲ್ಲ ಎಂದರೆ ಸರಿ. ನಾನು ಯಾರಿಗೂ ಭಯಪಟ್ಟು ಸಾಕ್ಷಿ ನುಡಿದಿರುವುದಿಲ್ಲ.

45. ಇಂಡಿಯನ್ ಪೆಟ್ರೋಲ್ ಬಂಕ್‌ನಲ್ಲಿ ಸಿಸಿ ಟಿವಿ ಕ್ಯಾಮರಾ ಇದೆ. ನಾನು ಸದರಿ ಪೆಟ್ರೋಲ್ ಬಂಕ್ ಗೆ ಪೆಟ್ರೋಲ್ ಹಾಕಿಸಿಕೊಳ್ಳಲು ಆಗಾಗ ಹೋಗುತ್ತಿರುತ್ತೇನೆ. ಆ ಕಾರಿನಲ್ಲಿ ಇದ್ದ ಬೇರೆ ವ್ಯಕ್ತಿಗಳು ಹೆಸರು ನನಗೆ ಹೇಳಲು ಆಗುವುದಿಲ್ಲ. ನನಗೆ ನೇರವಾಗಿ ಫೋನ್ ಸಂಪರ್ಕ ಯಾರು ಮಾಡಿರುವುದಿಲ್ಲ. ಆಕರ್ಶ ನನ್ನನ್ನು ಕರೆದುಕೊಂಡು ಹೋಗಿ ಕಾರಿನಲ್ಲಿ ಕೂರಿಸಿದ ಎಂದು ಹೇಳಲು

ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಆಕರ್ಶ ನನಗೆ ಈ ಪ್ರಕರಣದ ಬಗ್ಗೆ ಏನು ಮಾತನಾಡಿಲ್ಲ ಎಂದರೆ ಸರಿ. ಆಕರ್ಶ ನನ್ನನ್ನು ಕರೆದುಕೊಂಡು ಹೋಗಿ ಕಾರಿನಲ್ಲಿ ಕೂರಿಸಿಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

46. ಕಾರಿನಲ್ಲಿ ಕುಳಿತುಕೊಂಡಿದ್ದ ವ್ಯಕ್ತಿಗಳು ಯಾರು ನನ್ನೊಂದಿಗೆ ಈ ಪ್ರಕರಣದ ಬಗ್ಗೆ ಮಾತುಕತೆ ಮಾಡಿಲ್ಲ ಎಂದರೆ, ಸಾಕ್ಷಿ ಮಾಡಿದ್ದಾರೆ ಎನ್ನುತ್ತಾರೆ. ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಈ ದಿನ ನಾಲ್ಕನೇ ಬಾರಿ ಬಂದಿದ್ದೇನೆ. ನಾನು ಕಳೆದ ವಾರ ಸೋಮವಾರ ಮತ್ತು ಮಂಗಳವಾರ, ನಿನ್ನೆ ಹಾಗೂ ಇವತ್ತು ಬಂದಿದ್ದೇನೆ. ನಾನು ಇಷ್ಟು ದಿನ ನ್ಯಾಯಾಲಯಕ್ಕೆ ಬಂದು ಹೋಗುವಾಗ ಯಾರು ನನಗೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ.

47. ಪೊಲೀಸರನ್ನು ಬಿಟ್ಟು, ಬೇರೆ ಯಾವುದೇ ವ್ಯಕ್ತಿಗಳು ನಿಮಗೆ ಈ ಪ್ರಕರಣದ ಬಗ್ಗೆ ಸಾಕ್ಷಿ ನುಡಿಯಲು ಬೇರೆ ಯಾರು ಹೇಳಿಕೊಟ್ಟಿಲ್ಲ ಎಂದರೆ, ಸಾಕ್ಷಿ ನನಗೆ ಫೋನ್ ಮಾಡಿದಾಗ, ಫೋನ್‌ನಲ್ಲಿ ಇದ್ದ ವ್ಯಕ್ತಿ ಹೇಳಿರುತ್ತಾನೆ ಎನ್ನುತ್ತಾರೆ. ಫೋನ್‌ನಲ್ಲಿ ಮಾತನಾಡಿದ ವ್ಯಕ್ತಿ ನಿಮಗೆ ಇದೇ ರೀತಿ ಸಾಕ್ಷಿ ನುಡಿಯಬೇಕು ಎಂದು ಹೇಳಿರುದಿಲ್ಲ ಎಂದರೆ, ಸಾಕ್ಷಿ ಹೇಳಿರುತ್ತಾರೆ ಎನ್ನುತ್ತಾರೆ. ಯಾವುದೇ ವ್ಯಕ್ತಿ ನಿಮ್ಮನ್ನ ಕಾರಿನಲ್ಲಿ ಕೂರಿಸಿ ಈ ಪರಕರಣದ ಬಗ್ಗೆ ಫೋನ್‌ನಲ್ಲಿ ಮಾತನಾಡಿಸಿಲ್ಲ ಎಂದರೆ, ಸಾಕ್ಷಿ ಮಾತನಾಡಿಸಿದ್ದಾರೆ ಎನ್ನುತ್ತಾರೆ.

48. ಈ ರೀತಿ ಮಾತನಾಡಿಸಿದ್ದಾಗ, ನೀವು ನಿಮ್ಮ ಸರಹದ್ದಿನ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲು ಮಾಡಿದ್ದೀರ ಎಂದರೆ, ಸಾಕ್ಷಿ ನಾನು

ಕಾಮಾಕ್ಷಿಪಾಳ್ಯ ಪೊಲೀಸರಿಗೆ ತಿಳಿಸಿದ್ದೇನೆ, ಆದರೆ ಸರಿಹದ್ದಿನ ಪೊಲೀಸರಿಗೆ ದೂರು ನೀಡಿಲ್ಲ ಎನ್ನುತ್ತಾರೆ. ಕಾಮಾಕ್ಷಿಪಾಳ್ಯ ಪೊಲೀಸರಿಗೆ ನಾನು ಬರವಣಿಗೆ ರೂಪದಲ್ಲಿ ಈ ವಿಷಯ ತಿಳಿಸಿರುತ್ತೇನೆ. ಆ ಬಗ್ಗೆ ಪೊಲೀಸರು ನಿಮಗೆ ಹಿಂಬರಹ/ಸ್ವೀಕೃತಿ ನೀಡಿರುತ್ತಾರಾ ಎಂದರೆ, ಸಾಕ್ಷಿ ನಾನು ಪೊಲೀಸರಿಗೆ ಈ ಕುರಿತು ತಿಳಿಸಿರುತ್ತೇನೆ, ಆದರೆ ಬರವಣಿಗೆ ಮೂಲಕ ತಿಳಿಸಿರುವುದಿಲ್ಲ ಎನ್ನುತ್ತಾರೆ. ಕಾಮಾಕ್ಷಿಪಾಳ್ಯ ಪೊಲೀಸರು ಈ ವಿಚಾರ ತಿಳಿಸಿದ ಬಗ್ಗೆ ನಿಮ್ಮ ಹತ್ತಿರ ಯಾವುದೇ ದಾಖಲೆ ಅಥವಾ ಆಧಾರ ಇಲ್ಲ ಎಂದರೆ ಸರಿ.

49. ನಾನು ಒಂದು ವಾರದಿಂದ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬರುತ್ತಿರುವುದರಿಂದ, ಪೊಲೀಸರು ನನಗೆ ಒಂದು ನಾಟಕವನ್ನು ಸೃಷ್ಟಿಸಿ ಕೊಟ್ಟು ನನ್ನ ಮೂಲಕ ಈ ಕಥೆಯನ್ನು ಹೇಳಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವ ಬಗ್ಗೆ ಯಾವುದೇ ವ್ಯಕ್ತಿಗಳು ಸಂಪರ್ಕ ಮಾಡಿರುವುದಿಲ್ಲ ಮತ್ತು ಇದೇ ರೀತಿ ಸಾಕ್ಷಿ ನುಡಿಯಬೇಕು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

50. ಪಂಚನಾಮೆಗೆ ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಪೊಲೀಸರು ನಮ್ಮ ಬಾರಿಗೆ ಬಂದು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ನನ್ನ ಸಹಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಬಾರಿನ ಡಿವಿಆರ್ ಮತ್ತು ಡೆಸ್ಕಟಾಪ್‌ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿ. ನಾನು ನೋಡಿದ ಸಿಸಿ ಟಿವಿ ದೃಶ್ಯಾವಳಿಗಳು ನಮ್ಮ ಬಾರಿಗೆ

ಸಂಬಂಧ ಪಟ್ಟಿಲ್ಲ ಎಂದರೆ ಸರಿಯಲ್ಲ.

51. ನಮ್ಮ ಬಾರ್ ಮತ್ತು ರೆಸ್ಟೋರೆಂಟ್ ಇದೆ ಎಂದು ತೋರಿಸಲು ಪೊಲೀಸರು ನಮ್ಮಿಂದ ಲೈಸೆನ್ಸ ಪಡೆದುಕೊಂಡಿರುವುದಿಲ್ಲ. ಪೊಲೀಸ್ ರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು 1 ಮತ್ತು 12 ನೇ ಆರೋಪಿಗಳ ಪರ ಶ್ರೀ. ಎಸ್.ಡಿ ವಕೀಲರಿಂದಃ**

Ld. Counsel for A1 & 12 seeks adjournment for cross of PW17 on the ground that her Sr. is engaged in another case in Chennai wherein IG is the witness and seeks to take up the matter tomorrow for cross examination. Hence, cross deferred.

**ಪಾಟಿಸವಾಲು 3 ನೇ ಆರೋಪಿ ಪರ ಶ್ರೀ.ಡಿ.ಎಸ್.ಎಸ್ ವಕೀಲರ ಪರವಾಗಿ ಶ್ರೀ. ಕೆಪಿಪಿ ವಕೀಲರಿಂದಃ**

3 ನೇ ಆರೋಪಿ ಪರ ವಕೀಲರು ಹಾಜರು ಇದ್ದು, ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಪಾಟಿಸವಾಲು 4,6 ರಿಂದ 9,13 ಮತು 15 ರಿಂದ 17 ನೇ ಆರೋಪಿಗಳ ಪರ ಶ್ರೀ. ಆರ್.ಆರ್.ವಕೀಲರಿಂದಃ**

ಶ್ರೀ. ಆರ್.ಆರ್. ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಪಾಟಿಸವಾಲು 5 ನೇ ಆರೋಪಿ ಪರ ಶ್ರೀ. ಕೆ.ಆರ್.ಎಸ್ ವಕೀಲರ ಪರವಾಗಿ ಶ್ರೀ. ಕೆಪಿಪಿ ವಕೀಲರಿಂದಃ**

5 ನೇ ಆರೋಪಿ ಪರ ಶ್ರೀ. ಕೆಪಿಪಿ ವಕೀಲರು ಹಾಜರು ಇದ್ದು, ತಮ್ಮ ಪರ

ಪಾಟಿಸವಾಲು ಇಲ್ಲ ಎಂದು ನುಡಿಯುತ್ತಾರೆ.

**<u>ಪಾಟಿಸವಾಲು 10 ನೇ ಆರೋಪಿ ಪರ ವಕೀಲರಿಂದಃ</u>**

10 ನೇ ಆರೋಪಿ ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**<u>ಪಾಟಿಸವಾಲು 11 ನೇ ಆರೋಪಿ ಪರ ವಕೀಲರಿಂದಃ</u>**

11 ನೇ ಆರೋಪಿ ವಿಸಿ ಮೂಲಕ ಹಾಜರು ಇದ್ದು, 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**<u>ಪಾಟಿಸವಾಲು 14 ನೇ ಆರೋಪಿ ಪರ ಶ್ರೀ.ಎಡಿ ವಕೀಲರಿಂದಃ</u>**

14 ನೇ ಆರೋಪಿ ಪರ ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**(ಸಮಯ 2.00 ಗಂಟೆ, ಈ ಹಂತದಲ್ಲಿ 1 ಮತ್ತು 12 ನೇ ಆರೋಪಿಯ ಪರ ವಕೀಲರು ಸಮಯ ಕೋರಿದ ಮೆರೆಗೆ ಅವರ ಪರ ಪಾಟಿಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ 02.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟಿಸವಾಲು ಮಧ್ಯಾಹ್ನ 12.30 ಗಂಟೆಗೆ, 1 ಮತ್ತು 12 ನೇ ಆರೋಪಿಗಳ ಪರ ಶ್ರೀ. ಎಸ್.ಬಿ ವಕೀಲರಿಂದಃ</u>**

52. ನಿ.ಪಿ.114-ನೋಟೀಸ್‌ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ನೋಟೀಸಿನಲ್ಲಿ ತಿಳಿಸಿದಂತೆ,ನೀವು ತನಿಖಾಧಿಕಾರಿಯವರ ಮುಂದೆ ದಿಃ18.06.2024 ರವರೆಗೆ ಹಾಜರಾಗದೇ, ಸದರಿ ಸೂಚನೆಯನ್ನು ಉಲ್ಲಂಘನೆ ಮಾಡಿರುತ್ತೀರಿ ಎಂದರೆ, ಸಾಕ್ಷಿ ಸರಿ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸರಿಯಿಲ್ಲ ಎನ್ನುತ್ತಾರೆ.

53. ದಿಃ19.06.2024 ರಂದು ಉದ್ದೇಶಪೂರ್ವಕವಾಗಿ ನೀವು ತನಿಖಾಧಿಕಾರಿಯಾದ Asst Commissioner of police-ಚಂದನ್ ನವರಿಗೆ ಸಿಸಿ ಟಿವಿ ಫೂಟೇಜ್‌ಗಳನ್ನು ನೀಡಿರುವುದಿಲ್ಲ ಎಂದರೆ, ಸಾಕ್ಷಿ ಇಲ್ಲ ಎನ್ನುತ್ತಾರೆ. **(ಈ ಹಂತದಲ್ಲಿ 1 ಮತ್ತು 12 ನೇ ಆರೋಪಿಗಳ ಪರ ವಕೀಲರ ಮೊದಲ ಸರಿ ಎಂದು ಒಪ್ಪಿಕೊಂಡು ನಂತರ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಎರಡು ಉತ್ತರಗಳನ್ನು ಸಹ ತೆಗೆದುಕೊಳ್ಳಲಾಯಿತು).**

54. ನನ್ನ ಮುಖ್ಯ ವಿಚಾರಣೆಯ ಪ್ಯಾರ ನಂ.12 ರಲ್ಲಿ "ದಿಃ08.06.2024, ಸಮಯ 11:26:31 ರ ನಂತರ ನಾನು ಬಾರ್ ಒಳಗಡೆ ಬಂದು ಕೌಂಟರ್ ಕಡೆ ಹೋಗಿರುತ್ತೇನೆ" ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸಾಕ್ಷಿ ಬಂದಿರುತ್ತೇನೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ಯಾರ

ನಂ.12 ರಲ್ಲಿ "ಸಮಯ 11:26:31 ರ ನಂತರ" ಎಂದು ಬರೆದಿದ್ದು, ಈ ನಂತರ ಎಂದರೆ ನಿಮ್ಮ ಪ್ರಕಾರ ಸುಮಾರು ಎಷ್ಟು ಸಮಯದ ನಂತರ ಎಂದರೆ, ಸಾಕ್ಷಿ 6-7 ನಿಮಿಷದ ನಂತರ ಎನ್ನುತ್ತಾರೆ.

55. ನಿ.ಪಿ.112-ಮಹಜರ್ ರಲ್ಲಿ ಎಲ್ಲಿಯೂ "ಸಮಯ 11:26:31 ರ ನಂತರ" ಎಂದು ಮತ್ತು 6-7 ನಿಮಿಷಗಳ ನಂತರ ಎಂದು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ, ಸಾಕ್ಷಿ ಬರವಣಿ ಇದೆ ಎನ್ನುತ್ತಾರೆ.

**ಪ್ರಶ್ನೆ:** ಆ ರೀತಿ ಎಲ್ಲಿ ಇದೆ?

**ಉತ್ತರ:** ನಿ.ಪಿ.112- ಮಹಜರ್ ನ್ನು ಸಾಕ್ಷಿ ಓದಿ ನೋಡಿ 2 ನೇ ಪುಟದಲ್ಲಿ ಇದೆ ಎನ್ನುತ್ತಾರೆ.

**ಪ್ರಶ್ನೆ:** ಆ ರೀತಿ ಎಲ್ಲಿ ಬರೆದಿದೆ ಎಂದು ಓದಿ ಹೇಳಿ?

**ಉತ್ತರ:** ನಿ.ಪಿ.112- ಮಹಜರ್ ನ್ನು ಸಾಕ್ಷಿ ಓದಿ, ಆ ರೀತಿ ಬರೆದಿಲ್ಲ ಎನ್ನುತ್ತಾರೆ.

56. ಮಹಜರ್ ನ 4 ನೇ ಪುಟದಲ್ಲಿ 5 ನೇ ಲೈನ್ ನಲ್ಲಿ "11:25:47 ಗಳಿಗೆ ಹೊರನಡೆದಿರುವುದು ಕಂಡುಬಂದಿರುತ್ತದೆ" ಎಂದು ಬರೆದಿದೆ ಎಂದು ಸೂಚಿಸಿದ್ದಾಗ, ಸಾಕ್ಷಿ ಸರಿ ಎನ್ನುತ್ತಾರೆ. ಈ ಮಹಜರ್ ಪ್ರಕಾರ ಸಮಯ 11:26:31 ರ ನಂತರ 5-6 ನಿಮಿಷಗಳಲ್ಲಿ ಯಾರೂ ಬಾರಿನ ಒಳಗಡೆ ಇರಲಿಲ್ಲ ಎಂದರೆ, ಸಾಕ್ಷಿ ಕ್ಯಾಶಿಯರ್ ಇದ್ದರು ಎನ್ನುತ್ತಾರೆ. ನಾನು

ಸಮಯ 11:26:31 ರ, 5-6 ನಿಮಿಷಗಳ ನಂತರ ನಾನು ಹೊರಗಡೆ ಇಂದ ಒಳಗಡೆ ಹೋಗಿರುತ್ತೇನೆ.

57. ನನ್ನ ಮುಖ್ಯವಿಚಾರಣೆಯ ಪೇಜ್ ನಂ.4, ಪ್ಯಾರ ನಂ.2 ರಲ್ಲಿ ಪೆನ್ ಡ್ರೈವ್‌ನಲ್ಲಿ ಒಂದು ಕ್ಲಿಪ್ಪಿಂಗ್ 9 ನಿಮಿಷ 35 ಸೆಕೆಂಟ್ ಮತ್ತು ಇನ್ನೊಂದು ಕ್ಲಿಪ್ಪಿಂಗ್ 10 ನಿಮಿಷ ಇತ್ತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನನಗೆ ಪೊಲೀಸರು ನೀಡಿದ ನಿ.ಪಿ.114-ನೋಟೀಸ್ ನಲ್ಲಿ ಸೂಚಿಸಿಲ್ಲ ಎಂದರೆ ಸರಿ.

58. Asst. Commissioner of Police ಯಾವ ಊರಿನವರು ಎಂದರೆ ನನಗೆ ಗೊತ್ತಿಲ್ಲ. ಅವರನ್ನು ನಾನು ಎಂದೂ ನೋಡಿರುವುದಿಲ್ಲ. ದಿಃ19.06.2024 ರಿಂದ 11.07.2024 ರವರೆಗೆ ಈ ವಿಚಾರ "ಪೆನ್ ಡ್ರೈವ್ ನಲ್ಲಿ ಒಂದು ಕ್ಲಿಪ್ಪಿಂಗ್ 9 ನಿಮಿಷ 35 ಸೆಕೆಂಟ್ ಮತ್ತು ಇನ್ನೊಂದು ಕ್ಲಿಪ್ಪಿಂಗ್ 10 ನಿಮಿಷ ಇತ್ತು" ಎಂದು ಬರವಣಿಗೆಯಲ್ಲಿ ನೀಡಿಲ್ಲ ಎಂದರೆ ಸರಿ.

59. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.2 ರಲ್ಲಿ ದಿ.12.07.2024 ರಂದು ಪಂಚನಾಮೆಗೆ ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ಕಾಮಾಕ್ಷಿ ಪಾಳ್ಯ ತನಿಖಾಧಿಕಾರಿಯಾದ ವಿನಾಯಕ್ ರವರು ನಮ್ಮ ದುರ್ಗ ಬಾರ್ ಅಂಡ್ ರೆಸ್ಟೋರೆಂಟ್ ಗೆ ಬಂದಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ದಿಃ12.07.2024 ರಂದು "ಪೆನ್ ಡ್ರೈವ್‌ನಲ್ಲಿ ಒಂದು

ಕ್ಲಿಪ್ಪಿಂಗ್ 9 ನಿಮಿಷ 35 ಸೆಕೆಂಟ್ ಮತ್ತು ಇನ್ನೊಂದು ಕ್ಲಿಪ್ಪಿಂಗ್ 10 ನಿಮಿಷದ್ದು" ಎಂದು ಯಾರು ಬರವಣಿಗೆಯಲ್ಲಿ ಕೊಟ್ಟಿಲ್ಲ ಎಂದರೆ ಸರಿ.

60. ವಿಡಿಯೋ ಕ್ಲಿಪ್ಪಿಂಗ್ ಗಳನ್ನು ನಾನೇ ಕಾಪಿ ಮಾಡಿ ಇಟ್ಟಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ನಿ.ಪಿ.115- ಪ್ರಮಾಣ ಪತ್ರದಲ್ಲಿ "ವಿಡಿಯೋ ಕ್ಲಿಪ್ಪಿಂಗ್ ಗಳನ್ನು ನಾನೇ ಕಾಪಿ ಮಾಡಿ ಇಟ್ಟಿದ್ದೆ" ಎಂದು ನಮೂದು ಮಾಡಿರುವುದಿಲ್ಲ ಎಂದರೆ, ಸಾಕ್ಷಿ ಬರೆದಿದೆ ಎನ್ನುತ್ತಾರೆ. ಅದರಲ್ಲಿ ದಿನಾಂಕ 12.07.2024 ಎಂದು ಬರೆದಿಲ್ಲ ಎಂದರೆ ಸರಿ. ನನ್ನ ಬಳಿ ಪೆನ್ ಡ್ರೈವ್‌ವು ಇರಲಿಲ್ಲ, ಹಾಗೂ ನಾನು ಕಾಪಿ ಮಾಡದೇ ಇದ್ದ ಕಾರಣ, ನಾನು ಅಲ್ಲಿ ದಿನಾಂಕ ನಮೂದು ಮಾಡಿಲ್ಲ ಎಂದರೆ, ಸಾಕ್ಷಿ ದಿನಾಂಕ ನಮೂದು ಮಾಡಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು ಪೆನ್ ಡ್ರೈವ್ ತಂದ ಕಾಪಿ ಮಾಡಿ ಇಟ್ಟಿದ್ದೆ ಎನ್ನುತ್ತಾರೆ.

61. ದಿಃ19.06.2024 ರ ನಂತರ ಕಾಪಿ ಮಾಡಿರುತ್ತೇನೆ. ಎಷ್ಟು ದಿನಗಳ ನಂತರ ಕಾಪಿ ಮಾಡಿಟ್ಟಿದ್ದು ಎಂದರೆ, ಸಾಕ್ಷಿ ದಿಃ12.07.2024 ರಂದು ಕಾಪಿ ಮಾಡಿದ್ದೆ ಎನ್ನುತ್ತಾರೆ. ಪೊಲೀಸರು ಬರುವ ಮುಂಚೆಯೇ ನಾನು ಕಾಪಿ ಮಾಡಿ ಇಟ್ಟಿದ್ದೆ.

**ಪ್ರಶ್ನೆ:** ದಿಃ12.07.2024 ರಂದು ಬಾರ್ ನ್ನು ನೀವು ಎಷ್ಟು ಗಂಟೆಗೆ ತೆರೆದಿದ್ದು, ಹಾಗೂ ನೀವು ಬಾರ್ ಒಳಗಡೆ ಎಷ್ಟು ಗಂಟೆಗೆ ಬಂದಿದ್ದು . ಹೇಳಿ?

**ಉತ್ತರಃ** ನಮ್ಮ ಬಾರು ಬೆಳಗ್ಗೆ 10.00 ಗಂಟೆ ತೆರೆದಿದ್ದು, ನಾನು ಬಾರ್ ಒಳಗೆ ಬೆಳಗ್ಗೆ 10.30 ಗಂಟೆಗೆ ಬಂದಿರುತ್ತೇನೆ.

**ಪ್ರಶ್ನೆಃ** ಎಷ್ಟು ಗಂಟೆಗೆ ಪೆನ್ ಡ್ರೈವ್ ಡೌನ್ ಲೋಡ್ ಮಾಡಿದ್ದೀರಿ?

**ಉತ್ತರಃ** 12-1.00 ಗಂಟೆ ಸಮಯದಲ್ಲಿ ಡೌನ್ ಲೋಡ್ ಮಾಡಿದ್ದೇನೆ.

62. ನಾನು ಪೆನ್ ಡ್ರೈವ್ ಗೆ ಮಾಡದೇ ಇದ್ದ ಕಾರಣ, ನನ್ನ ಪ್ರಮಾಣ ಪತ್ರದಲ್ಲಿ ನಾನು ಈ ವಿಷಯವನ್ನು ತಿಳಿಸಿಲ್ಲ ಎಂದರೆ, ಸಾಕ್ಷಿ ನಾನು ಪ್ರಮಾಣ ಪತ್ರದಲ್ಲಿ ಸಮಯ ನಮೂದಿಸಿಲ್ಲ ಎನ್ನುತ್ತಾರೆ. ನಾನು 12-1.00 ಗಂಟೆ ಸಮಯದಲ್ಲಿ ಪೆನ್ ಡ್ರೈವ್‌ಗೆ ಡೌನ್ ಲೋಡ್ ಮಾಡಿದ್ದೇನೆ ಎಂದು ತೋರಿಸಲು ನನ್ನ ಡಿಜಿಟಲ್ ದಾಖಲೆ ಇಲ್ಲ ಎಂದರೆ ಸರಿ.

63. ನನ್ನ ಮುಖ್ಯ ವಿಚಾರಣೆಯ 4 ನೇ ಪೇಜ್, ಪ್ಯಾರ 4 ರಲ್ಲಿ ನಾನು ರೇಣುಕಾಸ್ವಾಮಿಯ ಜೊತೆ ನಾಲ್ಕು ಜನ ಬಂದಿದ್ದರು ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಪ್ರಶ್ನೆಃ** ನಿ.ಪಿ.112-ಮಹಜರ್ ನ ಪೇಜ್ 3, ಎರಡು screen shots ಗಳಲ್ಲಿ ಐದು ಜನಾನು ಇಲ್ಲ, ನಾಲ್ಕು ಜನಾನು ಇಲ್ಲ. ಏನು ಹೇಳುತ್ತೀರಿ?

**ಉತ್ತರಃ** 2 ನೇ screen shot ನಲ್ಲಿ ನಾಲ್ಕು ಜನಾನು ಇಲ್ಲ ಮತ್ತು ಐದು ಜನಾನು ಇಲ್ಲ. ಆದರೆ 1 ನೇ Screen shot ನಲ್ಲಿ ನಾಲ್ಕು ಜನ

ಇದ್ದಾರೆ.

64. ನಿ.ಪಿ.111 ಪೆನ್ ಡ್ರೈವ್ ಹೊಸದಾಗಿ ಖರೀದಿ ಮಾಡಿದ್ದ, ಅಥವಾ ಹಳೆಯದ್ಧ ಎಂದರೆ, ಸಾಕ್ಷಿ ಹೊಸದಾಗಿ ಖರೀದಿಸಿದ್ದು ಎನ್ನುತ್ತಾರೆ. ಒಂದು ಪೆನ್ ಡ್ರೈವ್‌ನ್ನು ಅದರ ಕವರ್ ಸವೇತ ಹಾಕಿ ತೋರಿಸಿ, ಹೊಸದಾಗಿ ಖರೀದಿ ಮಾಡಿದರೆ ಈ ರೀತಿ ಇರುತ್ತದೆ ಎಂದು ಸೂಚಿಸಿದಾಗ, ಸಾಕ್ಷಿ ಅದನ್ನು ನೋಡಿ ಹೌದು ಎನ್ನುತ್ತಾರೆ.

**ಪ್ರಶ್ನೆ:** ಈ ತರ ಬಾರ್ ಕೋಡು ಮತ್ತು ಬ್ಯಾಚ್ ನಂಬರ್ ಇರುತ್ತಿದ್ದು, ಅದನ್ನು ಏನು ಮಾಡಿರುತ್ತೀರಿ?

**ಉತ್ತರ:** ನನಗೆ ನೆನಪಿಲ್ಲ.

**ಪ್ರಶ್ನೆ:** ಕ್ಯಾಶ್ ಪೇಮೆಂಟ್ ಮಾಡಿದ್ದರೆ ರಶೀದಿ ನೀಡುತ್ತಾರೆ, ಅಥವಾ ಆನ್‌ಲೈನ್‌ನಲ್ಲಿ ಖರೀದಿ ಮಾಡಿದರೆ ಬರುತ್ತದೆ. ಏನು ಹೇಳುವಿರಿ?

**ಉತ್ತರ:** ನಾನು ಕ್ಯಾಶ್ ಕೊಟ್ಟು ಖರೀದಿಸಿದ್ದೆ.

**ಪ್ರಶ್ನೆ:** ಯಾವತ್ತು ಯಾವ ಅಂಗಡಿಯಲ್ಲಿ, ಎಷ್ಟು ದುಡ್ಡು ಕೊಟ್ಟು ಖರೀದಿ ಮಾಡಿದ್ದೀರೀ?

**ಉತ್ತರ:** ನಾನು ಕಾಪಿ ಮಾಡುವ ಒಂದು ದಿನ ಮುಂಚೆ ಖರೀದಿಸಿದ್ದೆ.

**ಪ್ರಶ್ನೆಃ** ನೀವು ಒಂ ದು ದಿನ ಮುಂಚೆ ಖರೀದಿಸಿದ್ದೀರಿ ಎಂದು ತೋರಿಸಲು ನಿಮ್ಮ ಬಳಿ ಯಾವುದಾದರು ದಾಖಲೆ ಇದೆಯ?

**ಉತ್ತರಃ** ಇಲ್ಲ.

**ಪ್ರಶ್ನೆಃ** ನಿಮ್ಮ ಬಾರಿಗೆ ಎಷ್ಟು ಕ್ಯಾಮರಾ ಇದೆ?

**ಉತ್ತರಃ** ನಾಲ್ಕು ಕ್ಯಾಮರಾ ಇದೆ.

65. ನಾಲ್ಕು ಸಿಸಿ ಕ್ಯಾಮರಾ ಇರುವ ಡಿವಿಆರ್ ನಲ್ಲಿ ಸ್ಟೋರೇಜ್ ಕ್ಯಾಪ್ಯಾಸಿಟಿ 1Terabite ಇರುತ್ತದೆ ಎಂದರೆ ಸರಿ. ಸಿಸಿ ಟಿವಿ ಕ್ಯಾಮರಾಗಳಲ್ಲಿ ಹಳೇ ಫೂಟೇಜ್‌ಗಳು delete ಆಗುತ್ತಾ ಹೊಸ ಫೂಟೇಜ್‌ಗಳು ರೇಕಾರ್ಡ ಆಗುತ್ತಿರುತ್ತವೆ ಎಂದರೆ ಸರಿ. ಹೊಸಾದು ರೇಕಾರ್ಡ ಆಗುವಾಗ ಹಳೆಯ ಫೂಟೇಜ್‌ಗಳು automatic ಆಗಿ delete ಆಗುತ್ತವೆ ಎಂದರೆ ಸರಿ.

66. ಡಿವಿಆರ್ 1Terabite storage capacity ಇದ್ದರೆ, ಅದು 10-15 ದಿನಗಳ ಒಳಗೆ ಮಾತ್ರ ಫೂಟೇಜ್‌ಗಳನ್ನು ಸ್ಟೋರ್ ಮಾಡಿಕೊಳ್ಳುತ್ತಿದ್ದು, ತದನಂತರ ಅವು ಡಿಲೀಟ್ ಆಗುತ್ತಾ ಹೋಗುತ್ತದೆ ಎಂದರೆ, ಸಾಕ್ಷಿ ಅದು ಕ್ಯಾಮರಾ ಕ್ವಾಲಿಟಿ ಮೇಲೆ depend ಆಗಿದ್ದು, 15-30 ದಿನಗಳವರೆಗೂ ಕೂಡ ಸ್ಟೋರೇಜ್ ಇರುತ್ತದೆ ಎನ್ನುತ್ತಾರೆ.

**ಪ್ರಶ್ನೆಃ** ದಿಃ08.06.2024 ರ ಫೂಟೇಜ್‌ಗಳನ್ನು,

ದಿಃ11.07.2024 ರಂದು ನೀವು ಪೆನ್ ಡ್ರೈವ್ ಖರೀದಿ ಮಾಡಿ. ನಂತರ ದಿಃ12.07.2024 ರಂದು ಡೌನ್ ಲೋಡ್ ಮಾಡಿದ್ದೀನಿ ಎಂದು ಹೇಳಿದ್ದು,ಈ ದಿನಗಳ ಲೆಕ್ಕಚಾರ ಮಾಡಿದರೆ, ಇದು 34 ದಿನಗಳ ಅವಧಿಯಾಗಿದ್ದು, ನೀವೇ ಹೇಳಿದಂತೆ 30 ದಿನಗಳ ನಂತರ ಫೂಟೇಜ್ ಡಿಲೀಟ್ ಆಗುತ್ತದೆ. ಏನು ಹೇಳುತ್ತೀರಿ?

**ಉತ್ತರಃ** ನಮ್ಮ ಸಿಸಿ ಕ್ಯಾಮರಾ ಹಳೆಯದಾಗಿದ್ದರಿಂದ, ನಮಗೆ 45 ದಿನಗಳ ವರೆಗೆ ಫೂಟೇಜ್ ಇರುತ್ತದೆ ಎಂದು ಹೇಳಿದ್ದರು ಎನ್ನುತ್ತಾರೆ.

**ಪ್ರಶ್ನೆಃ** ಯಾರು, ಯಾವತ್ತು ಮತ್ತು ಎಲ್ಲಿ ಹೇಳಿದ್ದು?

**ಉತ್ತರಃ** ನಮಗೆ ಸುಮಾರ ವರ್ಷಗಳ ಹಿಂದೆ ಕ್ಯಾಮರಾ ಇನ್ಸಟಾಲ್ ಮಾಡಿದಾಗ ಹೇಳಿದ್ದರು.

**ಪ್ರಶ್ನೆಃ** 45 ದಿನಗಳವರೆಗೆ ನಿಮ್ಮ ಸಿಸಿ ಟಿವಿ ಕ್ಯಾಮರಾ ಸ್ಟೋರೇಜ್ ಇರುತ್ತದೆ ಎಂದು ನಿಮ್ಮ ಬಳಿ ತೋರಿಸಲು ಯಾವುದೇ ದಾಖಲೆ ಇಲ್ಲ?

**ಉತ್ತರಃ** ದಾಖಲೆ ಇಲ್ಲ, ಆದರೆ ಇನ್ಸಟಾಲ್ ಮಾಡುವಾಗ ಹೇಳಿದ್ದರು ಎನ್ನುತ್ತಾರೆ.

**ಪ್ರಶ್ನೆಃ** ದಿಃ19.06.2024 ರಂದು ಎಷ್ಟು ಪೊಲೀಸರು ಎಷ್ಟು ಗಂಟೆಗೆ ಬಂದಿದ್ದರು?

**ಉತ್ತರಃ** ಸಮಯ ನೆನಪಿಲ್ಲ, ಆದರೆ ವಿನಾಯಕ್ ಮತ್ತು ಅವರೊಂದಿಗೆ

ಅವರ ಚಾಲಕ ಮತ್ತು ಇನ್ನೊಬ್ಬರು ಬಂದಿರುತ್ತಾರೆ.

67. ಆ ದಿನ ಪೊಲೀಸರು ಬಂದಿದ್ದರೆ ನಿಮ್ಮ ಸಿಸಿ ಟಿವಿ ಕ್ಯಾಮರಾದಲ್ಲಿ ರೇಕಾರ್ಡ ಆಗಿರುತ್ತದೆ ಎಂದರೆ ಸರಿ. ಆ ದಿನ ಅವರು ನಿಮ್ಮ ಬಾರ್ ಗೆ ಬಾರದೇ ಇದ್ದ ಕಾರಣ, ರೇಕಾರ್ಡ ಆಗಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬಂದರೆ ಅವರ ಜೊತೆ SOCO ತಜ್ಞರು ಸಹ ಬಂದಿರುತ್ತಾರೆ ಎಂದರೆ, ಸಾಕ್ಷಿ ಬಂದಿಲ್ಲ ಎನ್ನುತ್ತಾರೆ. ದಿಃ19.06.2024 ರಂದು ಪೊಲೀಸರು ನಮ್ಮ ಬಾರಿಗೆ ಬಂದಿದ್ದರೆ, ಅದೇ ದಿನ ಪೆನ್ ಡ್ರೈವ್‌ಗೆ ಡೌನ್ ಲೋಡ್ ಮಾಡಿಕೊಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ, ಸಾಕ್ಷಿ ತೊಂದರೆ ಇರಲಿಲ್ಲ ಎನ್ನುತ್ತಾರೆ.

**ಪ್ರಶ್ನೆಃ** Clip-1 ಮತ್ತು Clip-2 ಆಟೋಮೆಟಿಕ್ಕಾ ಅಥವಾ ನೀವೇ ಹೆಸರು ಕೊಟ್ಟಿದ್ದ?

**ಉತ್ತರಃ** ಅದು ಆಟೋಮೆಟಿಕ್.

**ಪ್ರಶ್ನೆಃ** Clip-1 ಮತ್ತು Clip-2 ಅಂದರೆ editing ಮತ್ತು insertion ಎಂದು ಅರ್ಥ.

**ಉತ್ತರಃ** ಗೊತ್ತಿಲ್ಲ.

68. ನಾನು ಹೇಳುತ್ತಿರುವ ಪೆನ್ ಡ್ರೈವ್‌ನ್ನು ಪೊಲೀಸರು ಎಡಿಟ್ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಪ್ರಶ್ನೆ:** ಬೆಂಗಳೂರಿನಲ್ಲಿ ಎಷ್ಟು ದಿವಸದಿಂದ ಇದ್ದೀರಿ?

**ಉತ್ತರ:** ಈ ಕೇಸಿಗೋಸ್ಕರ, ಕಳೆದವಾರ, ಮಂಗಳವಾರ, ಬುಧವಾರ ಮತ್ತು ಈ ವಾರದಲ್ಲಿ ಮಂಗಳವಾರ, ಬುಧವಾರ ಮತ್ತು ಈ ದಿನ ಬಂದಿದ್ದೇನೆ.

**ಪ್ರಶ್ನೆ:** ಈ ಅವಧಿಯಲ್ಲಿ ನೀವು ಬೆಂಗಳೂರಿನಲ್ಲಿಯೇ ಉಳಿದುಕೊಂಡಿದ್ದೀರ ?

**ಉತ್ತರ:** ನಾನು ತುಮಕೂರಿಗೆ ಹೋಗಿ ಬಂದು ಮಾಡುತ್ತಿದ್ದೇನೆ.

**ಪ್ರಶ್ನೆ:** ನಿಮ್ಮ ಖರ್ಚು ವೆಚ್ಚಗಳನ್ನೆಲ್ಲ Film Producers ನೋಡಿಕೊಳ್ಳುತ್ತಿದ್ದಾರೆ?

**ಉತ್ತರ:** ನಾನೇ ನೋಡಿಕೊಳ್ಳುತ್ತಿದ್ದೇನೆ.

**ಪ್ರಶ್ನೆ:** ಪೊಲೀಸರಿಗೆ ನಿಮ್ಮ ಹೆಸರು ಮತ್ತು ವಿಳಾಸವನ್ನು ಪೊಲೀಸರಿಗೆ Film Producers ನೀಡಿರುತ್ತಾರೆ ಎಂದರೆ?

**ಉತ್ತರ:** ಕೊಟ್ಟಿಲ್ಲ.

**ಪ್ರಶ್ನೆ:** ನಿನ್ನೆ ಏನೋ ದೂರು ನೀಡಿದ್ದೀರಲ್ಲ, ಅದನ್ನೆಲ್ಲ Film Producers ಸೇ ಕಿತಾಪತಿ ಮಾಡಿ ದೂರು ನೀಡುವಂತೆ ಚಿತಾವಣಿ ಮಾಡಿದ್ದರಿಂದ ನೀವು ದೂರನ್ನು ಸಲ್ಲಿದ್ದೀರಿ. ಏನು ಹೇಳುತ್ತೀರಿ?

**ಉತ್ತರ:** ಇಲ್ಲ.

69. ನನ್ನ ಮುಖ್ಯ ವಿಚಾರಣೆಯ ಪೇಜ್ 7, ಪ್ಯಾರ ನಂ.12 ರಿಂದ 14 ನಮೂದಿಸಿರುವ ಸಮಯಗಳನ್ನು ಪೊಲೀಸರು ಎಡಿಟ್ ಮಾಡಿದ್ದಾರೆ ಎಂದರೆ, ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ನಾನು ಸಲ್ಲಿಸಿದ 65 ಬಿ ಪ್ರಮಾಣ ಪತ್ರದಲ್ಲಿ File name and File Description ಬರೆದಿಲ್ಲ ಎಂದರೆ, ಸಾಕ್ಷಿ ನಾನು ಪ್ರಮಾಣ ಪತ್ರ ಓದಿದ್ದೇನೆ, ಆದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

70. ರೇಣುಕಾಸ್ವಾಮಿ ನಮ್ಮ ಬಾರ್ ಗೆ ಬಂದಿರುವುದಿಲ್ಲ ಹಾಗೂ ವಿಡಿಯೋ ಮತ್ತು screen shots ಗಳೆಲ್ಲವೂ ಗ್ರಾಫಿಕ್ಸ ಮತ್ತು ಮಾಫಿಂಗ್ ಆಗಿರುತ್ತವೆ ಎಂದರೆ ಸರಿಯಲ್ಲ. ಗ್ರಾಪಿಕ್ಸ ಮತ್ತು ಮಾಫಿಂಗ್ ಎಂದರೆ ನನಗೆ ಗೊತ್ತು.

**<u>ಮರುವಿಚಾರಣೆಃ</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**